ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೯, ಫೆಬ್ರವರಿ ೨೦೧೭

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಮಂಕುತಿಮ್ಮನ ಕಗ್ಗ ... ಪು. ೪
ರಾಂ ರಾಮ ... ಪು. ೫

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೦
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೨
ಬ್ಯಾಂಗ್ಕಾಕ್ ಪ್ರವಾಸ ... ಪು. ೧೩

ಚಿಲುಮೆಯ ಒಳಗೆ

ಹೀಗೊಂದು ಪ್ರೇಮ ಕಥನ ... ಪು. ೧೬
ನೀವು ಮಾಡಿ ... ಪು. ೧೪

ಟೊಮೇಟೊ: ಪ್ರಕೃತಿ ಒದಗಿಸಿದ ಅತ್ಯಂತ ಪ್ರಭಾವಶಾಲಿ ಪೋಷಕಾಂಶಗಳ ಮಾತ್ರೆ - ಪುಟ ೮

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಭಾಷಾಭಿಮಾನದ ಪರಾಕಾಷ್ಟೆಯನ್ನು ಇತರ ಭಾಷೆಗಳನ್ನು ಅವಗಣಿಸಿ, ತನ್ನದೇ ಹೆಚ್ಚೆಂದು ಬೀಗುವುದರಲ್ಲಿ ತೋರಿಸಿಕೊಂಡಾಗ, ಅಂತಹ ಉಪಯೋಗವೇನೂ ಆಗುವುದಿಲ್ಲ. ಬದಲಿಗೆ ಭಾಷೆ-ಭಾಷೆಗಳ ನಡುವೆ ವೈಮನಸ್ಯವೇ ಹೆಚ್ಚುತ್ತದೆ. ಹಾಗೆಂದು ಎಲ್ಲ ಭಾಷೆಗಳನ್ನೂ ಗೌರವಿಸಿ, ತನ್ನ ಮಾತೃ ಭಾಷೆಯನ್ನೇ ಕಲಿಯದೆ, ಭಾಷೆಯ ಸಂಸ್ಕೃತಿ, ಇತಿಹಾಸಗಳ ಬಗ್ಗೆ ಅರಿತುಕೊಳ್ಳದೆಹೋದರೆ, ಅದಕ್ಕಿಂತ ದುರದೃಷ್ಟಕರ ಸ್ಥಿತಿ ಮತ್ತೊಂದಿರುವುದಿಲ್ಲ. ಒಂದು ಭಾಷೆಯನ್ನು ಕಡೆಗಣಿಸುವುದನ್ನು ಕಂಡಾಗ ಅದರ ಉಳಿವಿಗಾಗಿ ಚಳುವಳಿಗಳಿತ್ಯಾದಿಗಳು ಹುಟ್ಟುಕೊಳ್ಳುತ್ತವೆ. ಆದರೆ ಅಂತಹ ಚಳುವಳಿಗಳ ಸಾಫಲ್ಯ ಇರುವುದು ನಮ್ಮ ನುಡಿಯ ಬಗ್ಗೆ ನಮಗಿರುವ ಪ್ರೇಮದಲ್ಲಿ.

ನಮ್ಮ ತಾಯಿಯನ್ನು ಎಷ್ಟು ಆಪ್ತ ಭಾವದಿಂದ ನೋಡುತ್ತೇವೆಯೋ, ಹಾಗೆಯೇ ನಮ್ಮ ತಾಯ್ನುಡಿಯನ್ನೂ ಕಾಣಬೇಕು. ಹಾಗಾದಾಗ ಮಾತ್ರ, ಸಹಜಪ್ರೇಮದಿಂದ ನಮ್ಮ ಭಾಷೆಯ ಬಗ್ಗೆ ಜಿಜ್ಞಾಸೆ ಮೂಡುತ್ತದೆ. ನಮ್ಮ ಭಾಷೆಯ ಉಗಮ, ಅಭಿವೃದ್ಧಿ ಹೇಗಾಯಿತು. ನಮ್ಮ ಭಾಷೆಯಲ್ಲಿ ಬಂದಿರುವ ಕೃತಿಗಳೇನು. ಅದನ್ನು ರಚಿಸಿದವರಾರು ಇತ್ಯಾದಿ. ಹೀಗೆ ನಮ್ಮಲ್ಲೇ ಕುತೂಹಲ ಮೂಡಿ, ಭಾಷೆಯ ಇತಿಹಾಸದ ಬಗ್ಗೆ ಹೆಚ್ಚಿನ ಅರಿವನ್ನು ಪಡೆದುಕೊಳ್ಳುತ್ತೇವೆ. ಇದು ಇಂದಿನ ಕಾಲಮಾನದ ಅವಶ್ಯಕತೆಯೂ ಹೌದು. ಏಕೆಂದರೆ, ಕುಟುಂಬಗಳು ಒಂದೆಡೆ ನಿಲ್ಲದೆ, ರಾಜ್ಯದೇಶಗಳೆಲ್ಲೆಡೆ ವಿಸ್ತರಿಸಿಹೋಗುತ್ತಿರುವುದರಿಂದ, ನಮ್ಮ ಭಾಷೆಯ ಬಗೆಗಿನ ತಿಳುವಳಿಕೆಯೂ ಕಡಿಮೆಯಾಗುತ್ತಿದೆ. ಇನ್ನಿತರ ಭಾಷೆಯವರು ಇದ್ದಕ್ಕಿದ್ದಂತೆ "ಕನ್ನಡದ ಬಗ್ಗೆ" ಹೇಳಿ ಎಂದಾಗ ಅಥವಾ ಅದರ ಹಿರಿಮೆಯನ್ನು ಅರಿತುಕೊಳ್ಳಲು ಬಯಸಿದಾಗ, ಅಥವಾ "ಹೇ, ನೋಡಿ ನಮ್ಮ ಭಾಷೆ ಎಷ್ಟು ಪುರಾತನದ್ದು, ಎಷ್ಟು ಸೊಗಸಾಗಿದೆ, ನಿಮ್ಮದರಲ್ಲಿ ಅಂತಹದ್ದೇನಿದೆ" ಎಂದು ಕೆಣಕಿದಾಗ, ನಮಗೆ ಉತ್ತರಿಸಲು ನಮ್ಮ ಬಳಿ ಮಾಹಿತಿ ಇರಬೇಕು. ಇದು ಬರೀ ಪುಸ್ತಕವನ್ನು ಓದಿ ಸಂಪಾದಿಸುವುದಕ್ಕೆ ಆಗದು. ಭಾಷೆಯ ಬಗ್ಗೆ ನಮ್ಮ ಎದೆಯಲ್ಲಿ ಪ್ರೀತಿಯ ತುಡಿತವಿರಬೇಕು.

ಓದುಗರೇ, ಹೊರನಾಡಿನ ಕನ್ನಡಿಗರು ಸೇರಿಕೊಂಡು ನಡೆಸುತ್ತಿರುವ ಈ ಪತ್ರಿಕೆಗೆ ನೀವೆಲ್ಲ ಬೆಂಬಲವನ್ನು ಕೊಟ್ಟು ಮುನ್ನಡೆಸುತ್ತಿದ್ದೀರಿ. ಅದಕ್ಕೆ ಧನ್ಯವಾದಗಳು. ಅಂತೆಯೇ, ನಮ್ಮ ಪ್ರೀತಿಯ ಭಾಷೆಯಾದ ಕನ್ನಡದ ಬಗ್ಗೆ ನಮ್ಮ ನಿಮ್ಮಲ್ಲಿ ಉತ್ಸಾಹವು ನೂರ್ಮಡಿಯಾಗಲಿ. ನಮ್ಮ ಹೃದಯದ ಬಡಿತದಲ್ಲಿ ಕನ್ನಡದ ಬಗ್ಗೆ ತುಡಿತವಿರಲಿ. ಕನ್ನಡವೇ ಪ್ರೀತಿಯಾಗಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ಫೆಬ್ರವರಿ, ಶ್ರೀ ಮನ್ಮಥ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ/ಫಾಲ್ಗುಣ ಮಾಸ

01 ಬು - ವಸಂತ ಪಂಚಮಿ
03 ಶು – ರಥ ಸಪ್ತಮಿ
04 ಶ - ಭೀಮಾಷ್ಟಮಿ, 07 ಮಂ - ಜಯ ಏಕಾದಶಿ,
11 ಶ - ಮಾಘ ಪೂರ್ಣಿಮಾ
14 ಭಾ - ವ್ಯಾಲೆಂಟೈನ್ಸ್ ಡೇ / ಸಂಕಷ್ಟ ಚತುರ್ಥಿ
22 ಬು - ವಿಜಯ ಏಕಾದಶಿ
25 ಶ - ಮಹಾಶಿವರಾತ್ರಿ
26 ಭಾ - ಸೂರ್ಯ ಗ್ರಹಣ
27 ಸೋ - ಫಾಲ್ಗುಣ ಮಾಸ ಆರಂಭ

ಮಾರ್ಚ್ ಶ್ರೀ ದುರ್ಮುಖಿ/ಹೇವಿಳಂಬಿ ನಾಮ ಸಂವತ್ಸರ, ಉತ್ತರಾಯಣ/ದಕ್ಷಿಣಾಯನ, ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

04 ಶ - ರಾಷ್ಟ್ರೀಯ ಭದ್ರತಾ ದಿನ
08 ಬು - ಮಹಿಳಾ ದಿನ/ಅಮಲಕೀ ಏಕಾದಶಿ
12 ಭಾ - ಹೋಳಿ ಹುಣ್ಣಿಮೆ
16 ಗು - ಸಂಕಷ್ಟ ಚತುರ್ಥಿ
24 ಶು - ಪಾಪ ಮೋಚಿನಿ ಏಕಾದಶಿ
27/28 - ಅಮಾವಾಸ್ಯೆ
29 ಬು - ಚಾಂದ್ರಮಾನ ಯುಗಾದಿ

ಸಿಡ್ನಿಯಲ್ಲಿ ಮಧ್ವನವಮಿ ಆಚರಣೆ:

ಈ ಬಾರಿ ಭಕ್ತರಿಗೆ ಅನುಕೂಲವಾಗಿ ಭಾನುವಾರ ಮಾರ್ಚ್ ೫ ರಂದು ಸಿಡ್ನಿ ನಗರದಲ್ಲಿ ವಿಜೃಂಭಣೆಯಿಂದ ನಡೆಯಿತು . ಹೆಲೆನ್ಸ್ಬರ್ಗ್ ದೇವಸ್ಥಾನದಲ್ಲಿ ಹರಿವಾಯು ಗುರುಗಳ ಅನುಗ್ರಹದಿಂದ ಶ್ರೀ ಕೃಷ್ಣ ಬೃಂದಾವನ (ಮೆಲ್ಬೋರ್ನ್)ನವರು, ಶ್ರೀ ರಾಘವೇಂದ್ರ ಭಕ್ತ ಮಂಡಳಿ (ಸಿಡ್ನಿ) ಇವರ ಸಹಕಾರದಿಂದ ನೆರವೇರಿತು.



ಮಾಘ ಮಾಸ ಶುಕ್ಲ ಪಕ್ಷ ನವಮಿಯಂದು ಶ್ರೀ ಮಧ್ವಾಚಾರ್ಯರ ಬದರಿಕಾಶ್ರಮ ಪ್ರವೇಶದ ಪುಣ್ಯ ದಿನವು - ಅದೇ ಮಧ್ವ ನವಮಿ ಎಂದು ಎಲ್ಲರಿಗೂ ತಿಳಿದ ವಿಷಯ. ಈ ದಿನ ಸಿಡ್ನಿ ಭಕ್ತವೃಂದವು ಆಚಾರ್ಯರಿಗೆ ವಿಶೇಷ ಪೂಜೆ, ಪಾರಾಯಣದಲ್ಲಿ ಪಾಲ್ಗೊಳ್ಳಲು ಹೆಲೆನ್ಸ್ಬರ್ಗ್ ದೇವಸ್ಥಾನದಲ್ಲಿ ನೆರೆದಿದ್ದರು.

ಬೆಳಿಗ್ಗೆ ಸುಮಾರು ೦೬:೩೦ ಇಂದ ಪೂಜೆಗೆ ಸಿದ್ಧತೆ ನಡೆಸಿದ್ದ ಪುತ್ತಿಗೆ ಮಠದ ಶ್ರೀ ವಿಶ್ವನಾಥ ಭಟ್, ಪೀಠದ ಮೇಲೆ ಮಧ್ವಾಚಾರ್ಯ ಹಾಗು ರಾಘವೇಂದ್ರ ಸ್ವಾಮಿಗಳ ವಿಗ್ರಹ ಮೂರ್ತಿಯನ್ನು ಸ್ಥಾಪಿಸಿ ಪಾರಾಯಣಕ್ಕೆ ಚಾಲನೆ ನೀಡಿದರು. ತಾರತಮ್ಯ ಅನುಸಾರ ಶ್ರೀ ವೆಂಕಟೇಶ ಸ್ತೋತ್ರ, ತೈತ್ತರೀಯ ಉಪನಿಷತ್, ಹರಿವಾಯು ಸ್ತುತಿ ಪುನಶ್ಚರಣೆ, ಪುರುಷ, ಶ್ರೀ ಹಾಗು ನಾರಾಯಣ ಸೂಕ್ತಗಳು, ಮಧ್ವಾಚಾರ್ಯ ರಚಿಸಿದ ದ್ವಾದಶ ಸ್ತೋತ್ರಗಳು, ಸುಮಧ್ವ ವಿಜಯ (ಪ್ರಥಮ ಸರ್ಗ), ರಾಯರ ಸ್ತೋತ್ರ, ಶ್ರೀ ಮಧ್ವನಾಮ, ಮತ್ತೆ ಕಡೆಯಲ್ಲಿ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ನಡೆಯುತ್ತಿದಂತೆಯೇ ಪೀಠದಲ್ಲಿ ಪಂಚಾಮೃತ ಅಭಿಷೇಕವು, ಸಾಲಿಗ್ರಾಮ ಪೂಜೆಯೂ, ಭಟ್ಟರು ನೆರವೇರಿಸಿದರು. ಬಂದು ಸೇರುತ್ತಿದ್ದ ಭಕ್ತರು ತಮ್ಮ ಶಕ್ತ್ಯಾನುಸಾರ ಸೇವೆಗಳಿಗೆ ಸಂಕಲ್ಪ ನಡೆಸಿದರು.

ಮಧ್ಯಾಹ್ನಕ್ಕೆ ಸುಮಾರು ೨೦೦ಕ್ಕೂ ಹೆಚ್ಚು ಜನ ಸೇರಿದ್ದು, ತಮ್ಮ ಶ್ರದ್ಧೆಯನ್ನು ದಾಸವಾಣಿ, ದೇವರನಾಮ ಹಾಗು ಭಕ್ತಿಗೀತೆಗಳು ಹಾಡುತ್ತ ತೋರಿಸಿದರು. ಮಹಾಮಂಗಳಾರತಿ ಮಾಡುವ ಮೊದಲು ಶ್ರೀ ಗುರುರಾಜ ಆಚಾರ್ಯರು ಉಪನ್ಯಾಸ ಮಾಡುತ್ತಾ ಮಧ್ವರು ಹೇಳಿದ, ಸಾರಿದ "ತತ್ವವಾದ" ಸಿದ್ಧಾಂತ ನಾವು ನಿತ್ಯ ಜೀವನದಲ್ಲಿ ಹೇಗೆ ಅರಿತು ತಿಳಿದು ಅನುಷ್ಠಾನಕ್ಕೆ ತರಬೇಕು ಎನ್ನುವುದರ ಬಗ್ಗೆ ಸಂಕ್ಷಿಪ್ತವಾಗಿ ಸೊಗಸಾಗಿ ಎಲ್ಲರಿಗೂ ಅರ್ಥವಾಗುವಂತೆ ಮನಮುಟ್ಟುವಂತೆ ವಿವರಿಸಿದರು. ಮುಂದಿನ ಪೀಳಿಗೆಗೆ ಆದ್ಯತೆ ಕೊಟ್ಟು ತಮ್ಮ ಸಂದೇಶವನ್ನು ಆಂಗ್ಲ ಭಾಷೆಯಲ್ಲೇ ತಿಳಿಸಿದರು. ಈ ಸಂದರ್ಭಕ್ಕೆ ಶ್ರೀ ಪುತ್ತಿಗೆ ಮಠದ ಸುಗುಣೇಂದ್ರ ಸ್ವಾಮಿಗಳವರು ಕೊಟ್ಟ ಸಂದೇಶವನ್ನು ತಾಂತ್ರಿಕ ಕಾರಣಗಳಿಂದ ಅಲ್ಲಿ ತೋರಿಸಲಾಗದಿದ್ದರೂ, ಫೇಸ್ಬುಕ್ ನಲ್ಲಿ ಪ್ರಕಟಿಸಿ ಭಕ್ತರಿಗೆ ಮುಟ್ಟಿಸಿದರು. ಮಹಾಮಂಗಳಾರತಿ, ನೈವೇದ್ಯ ನಂತರ ಬಾಳೆ ಎಲೆಯಲ್ಲಿ ಪ್ರಸಾದ ವಿತರಿಸಲಾಯಿತು. ಭಾರತದಲ್ಲಿ ನಡೆಸಿದಂತೆ ಅಷ್ಟೇ ಸಂಭ್ರಮದಲ್ಲಿ ಇಲ್ಲಿಯೂ ಇದನ್ನು ನಡೆಸಿ ಕೊಟ್ಟ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿದರು. ▪

ದಾನಗಳಲ್ಲಿ ಮಹಾದಾನ ವಿದ್ಯಾದನ ಅನ್ನುವ ಗಾದೆ ಮಾತು ಕೇಳಿದ್ದೇವೆ. ಸಿಡ್ನಿ ಕನ್ನಡ ಶಾಲೆಯು ಹೊರನಾಡಿನಲ್ಲಿ ಕನ್ನಡ ಮಕ್ಕಳಿಗೆ ಕನ್ನಡ ಕಲಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೇ.

ಇದೇ ಜನವರಿ ೨೦೧೭ ೧೧ ಮತ್ತು ೨೨ ರಂದು ಹಿರಿಯರಿಗೂ ಕನ್ನಡ ಕಲಿಯುವ ಅವಕಾಶ ಮಾಡಿಕೊಟ್ಟಿದ್ದು ನಿರೀಕ್ಷೆಗೂ ಮೀರಿ ಜನಪ್ರತಿಕ್ರಿಯಸಿದ್ದು ಸಂತಸದ ಸುದ್ದಿ. ಹದಿಮೂರು ವರ್ಷದಿಂದ ಹಿಡಿದು ಅರವತ್ತರ ಹರಯದವರೆಗೂ ವಯೋಮಿತಿ ಪ್ರಚಾರದಲ್ಲಿ ಪ್ರಕಟಿಸಿದ ಹಾಗೇ ಎಲ್ಲ ವಯಸ್ಸಿನ ವಿದ್ಯಾರ್ಥಿಗಳು ನೊಂದಣಿ ಮಾಡಿ ಸಮಯಕ್ಕೆ ಸರಿಯಾಗಿ ಹಾಜರಾಗಿದ್ದರು. ಶ್ರೀ ಕನಕಾಪುರ ನಾರಾಯಣ ಅವರ ನೇತೃತ್ವದಲ್ಲಿ ಶ್ರೀ ರಾಜೇಶ್ ಹೆಗ್ಗಡೆ, ಚಿರಂಜೀವಿಗಳಾದ ಸಂಜಯ್ ಮತ್ತು ಅಮೋಘ, ಕುಮಾರಿಯರಾದ ಸ್ವಾತಿ ಮತ್ತು ಸಿಂಧು ಪ್ರತಿ ಮೂವತ್ತು ನಿಮಿಷಗಳಿಗೊಮ್ಮೆ ಅಕ್ಷರ ಕಲಿಕೆ, ಪದಗಳು, ವಾಕ್ಯಗಳು, ಮಾತನಾಡುವುದು ಮತ್ತು ಅನೇಕ ಆಟಗಳನ್ನೊಳಗೊಂಡ ಶಬ್ದಕೋಶ ಹೀಗೇ ವಿವಿಧ ರೀತಿಯ ಹೊಸ ಬಗೆಯ ಕಲಿಕೆ ಎಲ್ಲರ ಗಮನ ಸೆಳೆಯುವಂತೆ ಯೋಜಿಸಲಾಗಿತ್ತು.

ಅದಕ್ಕೆ ತಕ್ಕಂತೆ ಸ್ಪಂದಿಸಿದ ವಿದ್ಯಾರ್ಥಿಗಳೂ ಸಹ ತಮ್ಮ ವಯಸ್ಸಿನ ಅಂತರ ಎಣಿಸದೇ ಒಂದುಗೂಡಿ ಸಹಕಾರದಿಂದ ಆಟಗಳಿಂದ ಪದಗಳನ್ನು ಕಲಿಯುವಾಗ ನಕ್ಕು ನಲಿದ ಕ್ಷಣಗಳು ಮರೆಯಲಾರದ ಘಳಿಗೆ. ಬಣ್ಣಗಳ ಪಾಠ ಮಾಡುವಾಗ ಚಿ ಸಂಜಯ್ ಕಪ್ಪು,ಕೆಂಪು,ಹಳದಿ ನೀಲಿ ಇನ್ನೂ ಅನೇಕ ಬಣ್ಣಗಳ ಜೊತೆ ಚೆನ್ನದ ಉದಾಹರಣೆಗೆ "ನಿಮ್ಮ ಅಮ್ಮ ನಿನ್ನನ್ನು ಚೆನ್ನಾ ಎಂದು ಕರೆಯುತ್ತರಲ್ಲವೇ" ಎಂದು ಹೇಳಿದ್ದು ಎಲ್ಲರೂ ಆಶ್ಚರ್ಯದಿಂದ ಮುಖನೋಡಿಕೊಂಡು ಮುಗುಳುನಗೆ ಬೀರಿದ ಘಳಿಗೆಯೂ ಮರೆಯುವಂತಿಲ್ಲ, ಅದು ಸಮಯಸ್ಫೂರ್ತಿ ಯಿಂದ ಬಂದ ಉದಾಹರಣೆ ಎಂದು ನಂತರ ತಿಳಿಯಿತು. ತರಕಾರಿ ಹೆಸರುಗಳು ಮತ್ತು ಕನ್ನಡ ಟೈಪಿಂಗ್ ತೋರಿಸಿಕೊಟ್ಟ ಶಾಲೆಯ ವಿದ್ಯಾರ್ಥಿಗಳೇ ಆದ ಅಮೋಘ ಮತ್ತು ಸ್ವಾತಿ ಅವರ ಕಲಿಸುವ ವಿಧಾನ ಎಲ್ಲರ ಗಮನ ಸೆಳೆದಿತ್ತು. ಮೊದಲ ದಿನ ಬಂದಾಗ ಕಾಗುಣಿತ ಕಲಿಯಲು ಬಂದ ವಿದ್ಯಾರ್ಥಿಗಳು ಎರಡನೆ ದಿನದ ಅಂತ್ಯಕ್ಕೆ ವಾಕ್ಯಗಳನ್ನು ಸರಾಗವಾಗಿ ಓದುವ ಸಾಮರ್ಥ್ಯಪಡೆದಿದ್ದರು.ಪ್ರತಿಯೊಬ್ಬರೂ ಉದ್ದದ ವಾಕ್ಯಗಳನ್ನು ಓದಿ ಮುಗಿಸುತ್ತಿದ್ದಂತೆ ಉಳಿದವರು ಚಪ್ಪಾಳೆ ಮೂಲಕ ಸಂತಸ ವ್ಯಕ್ತಪಡಿಸುತ್ತಿದ್ದರು. ಭಾಷೆಯ ವಿಶೇಷತೆ, ಅದರ ಹಿನ್ನೆಲೆ, ಸೊಗಡು, ವಿಭಿನ್ನತೆಯಲ್ಲಿನ ಸೊಗಸು ಇನ್ನೂ ಅನೇಕ ವಿಷಯ ಶ್ರೀ ಕನಕಾಪುರ ನಾರಾಯಣ ಅವರು ಪಾಠ ಕಲಿಸುವ ನಡುವೆಯೇ ತಿಳಿಸಿಕೊಟ್ಟರು. ವಿದ್ಯಾರ್ಥಿಗಳಿಗೆ ಬರವಣಿಗೆಗೆ ಸಹಾಯ, ಶಿಕ್ಷಕರ ಸಮಯ ನಿರ್ವಹಣೆ, ಪುಸ್ತಕ ಮತ್ತು ಊಟ ತಿಂಡಿವ್ಯವಸ್ಥೆ ನನ್ನ ಜವಾಬ್ದಾರಿಯಾಗಿತ್ತುಅದಕ್ಕೆ ಸಾಕಷ್ಟು ಸಹಾಯವೂ ದೊರಕಿತು.

ಊಟ, ತಿಂಡಿ, ಹಣ್ಣಿನ ರಸ, ಮಿಠಾಯಿಗಳನ್ನು ಸಮಯಕ್ಕೆ ತಕ್ಕಂತೆ ಒದಗಿಸಲಾಗಿತ್ತು. ಹಸಿವು ಬಾಯಾರಿಕೆ ಎಂಬ ಪದಗಳಿಗೆ ಅಲ್ಲಿ ಅವಕಾಶವೇ ಇರಲಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ಸಲ ಕ್ರಾಶ್ ಕೋರ್ಸ್ ಜಾಣ ಜಾಣೆಯರ ವೃಂದ ಚೆನ್ನಾಗಿ ಕಲಿತು ಖುಷಿಯಿಂದ ಬೀಳ್ಕೊಟ್ಟಿದ್ದು ನೋಡಲು ಚಂದ ಇತ್ತು. ▪



ಒಗಟೆಯೇನೀಸೃಷ್ಟಿ? ಬಾಳಿನರ್ಥವೇನು ? |
ಬಗೆದು ಬಿಡಿಸುವರಾರು ಸೋಜಿಗವನಿದನು ? ||
ಜಗವ ನಿರಮಿಸಿದ ಕೈಯೊಂದಾದೊಡೇಕಿಂತು ||
ಬಗೆಬಗೆಯ ಜೀವಗತಿ?-ಮಂಕುತಿಮ್ಮ ||

ಒಗಟೆಯೇನೀಸೃಷ್ಟಿ=ಒಗಟೇ+ಏನು+ಈ+ಸೃಷ್ಟಿ?, ಬಾಳಿನರ್ಥವೇನು = ಬಾಳಿನ+ಅರ್ಥವೇನು, ಬಗೆದು ಬಿಡಿಸುವರಾರು=ಬಗೆದು ಬಿಡಿಸುವವರು+ಯಾರು, ಸೋಜಿಗವನಿದನು = ಸೋಜಿಗವನು+ಇದನು. ಕೈಯೊಂದಾದೊಡೇಕಿಂತು = ಕೈ+ಒಂದು+ಆದೊಡೆ+ಏಕೆ+ಇಂತು.

ಈ ಸೃಷ್ಟಿಯು ಒಗಟೇ? ಈ ಬಾಳಿಗೆ ಅರ್ಥವೇನು? ಆದರೆ ಈ ಒಗಟನ್ನು ಬಿಡಿಸುವವರು ಯಾರು? ಈ ಜಗತ್ತನ್ನು ಸೃಷ್ಟಿಮಾಡಿದ ಕೈ ಒಂದೇ ಆದರೆ, ಸೃಷ್ಟಿಯಲ್ಲಿ ಸಮಾನತೆಯೇಕಿಲ್ಲ? ಬೇರೆ ಬೇರೆಯಾದ ಜೀವನಗತಿ ಏಕೆ? ಎನ್ನುವ ಪ್ರಶ್ನೆಗಳನ್ನು ತಮಗೆ ತಾವೇ ಕೇಳಿಕೊಳ್ಳುವ ರೀತಿಯಲ್ಲಿ ಶ್ರೀ ಗುಂಡಪ್ಪನವರು, ನಮ್ಮೆಲ್ಲರ ಮುಂದೆ ಈ ಮುಕ್ತಕದ ರೂಪದಲ್ಲಿ ಇಟ್ಟಿದ್ದಾರೆ.

ಎಲ್ಲ ಜೀವಿಗಳಲ್ಲೂ ಇರುವ ಆ ಚೇತನವು ಜ್ಞಾನ ಸ್ವರೂಪ. ಆದರೆ ಕೆಲವರು ಜ್ಞಾನಿಗಳು ಮತ್ತೆ ಕೆಲವರು ಏಕಿಲ್ಲ? ಎಂದರೆ, ಕೆಲವರ ಕನ್ನಡಿ ಒರೆಸಿ ಶುದ್ಧವಾಗಿದೆ, ಕೆಲವರ ಕನ್ನಡಿಯ ಮೇಲೆ ಧೂಳು ಕೂತಿದೆ. ಧೂಳನ್ನು ಒರೆಸಿದರೆ ಅದೂ ಸಹ ಪ್ರಕಾಶಿಸುತ್ತಾ, ಶುದ್ಧ ಬಿಂಬವನ್ನು ಪ್ರತಿಫಲಿಸುತ್ತದೆ. ಆದರೂ ಏನಿದು ಪ್ರಪಂಚ ಎಂಬ ಪ್ರಶ್ನೆ ಮತ್ತು ಅರ್ಥವೇ ಆಗುವುದಿಲ್ಲವಲ್ಲ ಅಥವಾ ನಮಗೆ ಅರ್ಥವಾಗಿರುವುದು ಪೂರ್ಣವಲ್ಲ ಎಂಬ ಭಾವ ಎಲ್ಲರಿಗೂ ಬರುತ್ತದೆ. ಇದು ಅರ್ಥವಾಗದ ಕಗ್ಗಂಟಾದರೆ ಯಾರಾದರೂ ಬಿಡಿಸಬಹುದಲ್ಲ ಎನ್ನುವ ಪ್ರಶ್ನೆಯೂ ಉದ್ಭವವಾಗುತ್ತದೆ. ಈ ಜಗತ್ತನ್ನು ನಿರ್ಮಿಸಿದ ಅಥವಾ ಸೃಷ್ಟಿಸಿದ "ಕೈ" ಒಂದೇ ಎಂದಾದರೆ, ವಿಧವಿಧವಾದ ಅಸಮತೆಯಿಂದ ಏಕೆ ಕೂಡಿದೆ, ಎನ್ನುವ ಸಂದೇಹ, ಪ್ರಶ್ನೆ ವಿಚಾರವಂತರಾದ ಎಲ್ಲರ ಮನಸ್ಸಲ್ಲೂ ಉದ್ಭವವಾಗುತ್ತದೆ, ಅಲ್ಲವೇ!! ಹಾಗೆಯೇ ಇದೆ, ಈ ಮುಕ್ತಕದ ಭಾವ.

ಈ ಹಿಂದೆಯೇ ಹೇಳಿದಂತೆ, ಈ ಜಗತ್ತಿನ ಗುಟ್ಟನ್ನು ಛೇಧಿಸಲು ಈವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ. ಪ್ರಯತ್ನಪಟ್ಟವರಿಗೆಲ್ಲ ಒಂದೊಂದು ರೂಪದಲ್ಲಿ ಕಾಣುವ ಈ ಜಗತ್ತಿನ ನಿಜರೂಪ ಕಂಡುಕೊಳ್ಳುವಲ್ಲಿ ಯಾರೂ ಪೂರ್ಣ ಸಫಲರಲ್ಲ. ಹಾಗೆಯೇ ಈ ಜಗತ್ತಿನ ಎಲ್ಲ ಜೀವರಾಶಿಗಳಲ್ಲೂ ಹೇರಳವಾದ ವೈವಿಧ್ಯತೆ ಇದೆ. ಒಬ್ಬ ಮನುಷ್ಯನಿದ್ದಂತೆ ಇನ್ನೊಬ್ಬನಿಲ್ಲ. ಒಬ್ಬನ ಮನಸ್ಸು ಬುದ್ಧಿಗಳಿದ್ದಂತೆ ಮತ್ತೊಬ್ಬರದ್ದಿಲ್ಲ. ಅವರವರ ಜೀವನ ಅವರವರದ್ದು. ಅವರವರ ಭಾಗ್ಯ ಅವರವರದ್ದು. ಒಬ್ಬರ ನೋವು ಮತ್ತು ಆ ನೋವಿಗೆ ಕಾರಣ ಮತ್ತೊಬ್ಬರ ನೋವು ಮತ್ತು ಅದರ ಕಾರಣದಂತಿಲ್ಲ.

ಒಬ್ಬರ ಸುಖ ಮತ್ತದರ ಕಾರಣ ಇನ್ನೊಬ್ಬರಿಗಿಲ್ಲ. ಒಬ್ಬರ ಸುಖದ ಕಾರಣವು ಮತ್ತೊಬ್ಬರ ದುಃಖಕ್ಕೆ ಕಾರಣವಾಗಬಹುದು. ಇದರ ಗುಟ್ಟನ್ನು ಬಿಡಿಸುವವರಾರು? ಈ ಎಲ್ಲವೂ ಮಾನವನಿಗಷ್ಟೇ ಅಲ್ಲ. ಸಕಲ ಪ್ರಾಣಿಗಳಿಗೂ ಅನ್ವಯಿಸುತ್ತದೆ. ನಮ್ಮ ಮನೆಯ ಬೀದಿಯಲ್ಲಿ ಒಂದು ಮುದಿ ನಾಯಿ, ಹೊತ್ತು ಹೊತ್ತಿನ ಊಟಕ್ಕೆ ಹೋರಾಡುವಾಗ, ಹಾಕಿದ್ದ ಯಾವುದನ್ನೂ ತಿನ್ನಲಾಗದೆ ಮುದಿತನ, ಸಾವು-ಬದುಕಗಳ ಮಧ್ಯದಲ್ಲಿ ನರಳುವಾಗ ಅಥವಾ ಬಹಳ ದಿನಗಳಿಂದ ಬೆಳೆದು ಹೆಮ್ಮರವಾಗಿ ಎಲ್ಲರಿಗೂ ನೆರಳನ್ನೂ, ಪ್ರಾಣಿ-ಪಕ್ಷಿಗಳಿಗೆ ಆಹಾರವನ್ನೂ, ಆಶ್ರಯವನ್ನೂ ನೀಡಿದ ಒಂದು ಮರವನ್ನು ಯಾವುದೋ ಕಾರಣಕ್ಕೆ ಕಡಿದಾಗಲೂ, ಹೇ! ಪರಮಾತ್ಮ ಏನಿದು ಈ ಜೀವಿಯ ಅವಸ್ಥೆ ಎಂದು ನನ್ನ ಮನಸ್ಸು ಕರಗುತ್ತದೆ. ಆದರೆ ಅದರ ಅವಸ್ಥೆಗೆ ಉತ್ತರ ಖಂಡಿತ ನನಗೆ ಸಿಗುವುದಿಲ್ಲ. ಇದು ಎಲ್ಲ ಪ್ರಾಣಿಗಳ ಪರಿಸ್ಥಿತಿ.

ಅಷ್ಟೇ ಅಲ್ಲ ಇಂದು ಸುಖ, ನಾಳೆ ದುಃಖ, ಇಂದು ಆರೋಗ್ಯ, ನಾಳೆ ಅನಾರೋಗ್ಯ, ಇಂದು ಮಿತ್ರ, ನಾಳೆ ಶತ್ರು, ಇಂದು ಸಂತೋಷ, ನಾಳೆ ಬೇಸರ ಹೀಗೆ ಇಂದು ನಾಳೆಗಳಲ್ಲಿ ಮತ್ತು ದಿನದಿನಕ್ಕೆ ಬೇರೆಬೇರೆಯೇ ಭಾವಗಳು, ಈ ರೀತಿಯ ವೈವಿಧ್ಯಕ್ಕೆ ಕಾರಣರಾರು ಅಥವಾ ಕಾರಣವೇನು? ನಾವೆಷ್ಟು ಕಾರಣ? ಪರರೆಷ್ಟು ಕಾರಣ? ವಿಧಿಯೆಷ್ಟು ಕಾರಣ? ವಿಧಾತನೆಷ್ಟು ಕಾರಣ? ಹೀಗೆ ಹತ್ತು ಹಲವಾರು ಪ್ರಶ್ನೆಗಳ ಭಾವವೇ ಈ ಮುಕ್ತಕ. ಈ ಮುಕ್ತಕ ದಲ್ಲಿ ಬರುವ ಸೂಕ್ತ ಪ್ರಶ್ನೆಗಳು ನಮ್ಮ ನಿಮ್ಮಲ್ಲಿಯೂ ಸಹ ಎಂದಾದರೂ ಉದ್ಭವಿಸಿರಬಹುದು ಉತ್ತರ ಸಿಕ್ಕಿಲ್ಲದಿರಬಹುದು. ▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಕತ್ತೆಗೊಂದು ಕಾಲ

"ಏನ್ಕಾಲ ಬಂತು ಕಾಗಣ್ಣ. ಬೀದಿಯಲ್ಲಿ ಬಿದ್ದ ಕಾಗದ ತಿಂದುಕೊಂಡು ನಮ್ಮ ಪಾಡಿಗೆ ನಾವಿದ್ದೆವು. ನಮ್ಮ ಕುಲಕ್ಕೇ ಕಂಟಕ ಬಂದಿತು" ದುಗುಡದಿಂದ ನುಡಿಯಿತು ಕತ್ತೆ.

"ಏಕೆ? ಏನಾಯಿತು?" ಕೇಳಿತು ಕಾಗೆ.

"ನನ್ನನ್ನು ರಾಷ್ಟ್ರಪ್ರಾಣಿ ಮಾಡುವರಂತೆ."

"ಕಂಗ್ರಾಜುಲೇಶನ್ಸ್. ಯಾರು ಹೇಳಿದ್ದು?"

"ಯಾವುದೋ ಅರಮನೆಯ ಸಾಹಿತಿಗಳು."

"ಏಕಂತೆ? ನಿನ್ನನ್ನು ರಾಷ್ಟ್ರಪ್ರಾಣಿ ಮಾಡಲು ಕಾರಣಗಳೇನು? ಚೆನ್ನಾಗಿ ಹೊಡೆಸಿಕೊಂಡರೂ ಕೆಲಸ ಮಾಡುವೆಯೆಂಬ ಕಾರಣವೆ?"

"ಹಾಗಿದ್ದರೆ ಸ್ಲಂಗಳಲ್ಲಿನ ಕುಡುಕನ ಹೆಂಡತಿಯೇ ಆ ಪಟ್ಟಕ್ಕೆ ಸೂಕ್ತವಾಗುತ್ತಿದ್ದಳು"

"ನಿನ್ನ ಶ್ರಮಜೀವನ ಮೆಚ್ಚಿರಬಹುದೆ?"

"ಹ್ಹ! ಡಿಮಾನಿಟೈಸೇಶನ್ ನಂತರದ ಒಂದು ತಿಂಗಳಲ್ಲಿ ಬ್ಯಾಂಕಿನವರು ದುಡಿದ ಶ್ರಮದ ಮುಂದೆ ಕತ್ತೆಗಳು ಸೋಮಾರಿಗಳು"

"ಬಿಟ್ಟಿ ಕೆಲಸ ಮಾಡುವೆಯೆಂದೆ?"

"ಜಾಯಿಂಟ್ ಫ್ಯಾಮಿಲಿಯ ಹಿರಿಯ ಸೊಸೆಯರು ಮಾಡುವ ಬಿಟ್ಟಿ ಚಾಕರಿಯ ಮುಂದೆ ನಮ್ಮದೇನು ಮಹಾ ಬಿಡು."

"ಹಾಕಿದ್ದನ್ನು ತಿಂದುಕೊಂಡಿರುವೆ ಎಂದೆ?"

"ಹಾಗಿದ್ದರೆ ಹೆನ್‌ಪೆಕ್ಡ್ ಹಸ್ಬೆಂಡೇ ರಾಷ್ಟ್ರಪ್ರಾಣಿಯಾಗಬೇಕಿತ್ತು."

"ಕತ್ತೆಗಳೆಂದರೆ ದಡ್ಡಶಿಖಾಮಣಿಗಳು ಎಂದೆ?"

"ಅದೇ ಕಾರಣವಾಗಿದ್ದರೆ ದೆಹಲಿಯ ಹಾಲಿ ಮುಖ್ಯಮಂತ್ರಿಯೇ ನ್ಯಾಷನಲ್ ಅನಿಮಲ್ ಆಗಬೇಕಿತ್ತು"

"ತಿಳಿಯಿತು."

"ಏನು?"

"ಕತ್ತೆ ಕತ್ತೆಯೆಂದೇಕೆ ಜರೆಯುವಿರಯ್ಯಾ... ಕತ್ತೆ ಕದಿಯದು, ಕತ್ತೆ ಪುಸಿ ನುಡಿಯದು; ಕತ್ತೆ ಎನ್ನಾತ್ಮದ ಗುರು ಕಾಣ ಕತ್ತೆಯ ತಂದೆ' ಎಂದಿದ್ದಾರೆ ಬೀಚಿ. ನೀನು ಪ್ರಾಮಾಣಿಕ. ಇದು ಪ್ರಾಮಾಣಿಕತೆಯ ಅವನತಿಯ ಕಾಲ. ಪ್ರಾಮಾಣಿಕ ಪ್ರಾಣಿಯನ್ನು ರಾಷ್ಟ್ರಪ್ರಾಣಿ ಮಾಡಿದರೆ ಅದರ ಅವನತಿ ಆಗಿ ಪ್ರಾಮಾಣಿಕತೆ ನಶಿಸುವಂತೆ ಮಾಡಲು ತೋಳ-ನರಿ ಕಂಬೈನ್ಸ್ ಮಾಡಿರುವ ಪ್ಲ್ಯಾನ್ ಇರಬಹುದು ಇದು"

"ಊಹೂಂ. ಕತ್ತೆಯ ಹಾಲು ಹಸುವಿನ ಹಾಲಿಗಿಂತ ಹೆಚ್ಚು ಬೆಲೆ ಬಾಳುವುದಂತೆ. ಅದಕ್ಕೇ ನಮ್ಮನ್ನು ರಾಷ್ಟ್ರಪ್ರಾಣಿ ಮಾಡಬೇಕಂತೆ" ಎಂದಿತು ರಾಸಭ.

"ವಾಟ್ ಎ ಜೋಕ್! ಒಂದು ವೇಳೆ ಕತ್ತೆ ಹಾಲಿಗಿಂತ ಡೈರಿ ಹಾಲಿನ ಬೆಲೆ ಜಾಸ್ತಿಯಾದರೆ ಡೈರಿಯನ್ನೇ ರಾಷ್ಟ್ರೀಯ ಪ್ರಾಣಿ ಎನ್ನುವರಂತೇನು? ಕಾರಣ ಅದು ಇರಲಾರದು."

"ಮತ್ತೆ?"

"ಹುಲಿಯನ್ನು ಅದರ ಧೈರ್ಯ, ಪರಾಕ್ರಮ, ನಡಿಗೆಯ ಗಾಂಭೀರ್ಯ, ಠೀವಿ, ಮುಂತಾದ ಗುಣಗಳನ್ನು ಮೆಚ್ಚಿ ನ್ಯಾಷನಲ್ ಅನಿಮಲ್ ಎಂದು ಆರಿಸಿದ್ದಲ್ಲವೆ?"

"ಹೌದು"

"ಆಗ ಅವು ಶ್ರೇಷ್ಠ ಗುಣಗಳಾಗಿದ್ದವು."

"ಈಗ?"

"ಈಗ ಜನಪ್ರತಿನಿಧಿಗಳು ನಿನ್ನ ಹಲವಾರು ಗುಣಗಳನ್ನು ಅಳವಡಿಸಿಕೊಂಡುಬಿಟ್ಟಿದ್ದಾರೋ ಕತ್ತೆ. ಸಿಕ್ಕಸಿಕ್ಕದ್ದನ್ನೆಲ್ಲ ತಿನ್ನುತ್ತಾರೆ. ಅಷ್ಟನ್ನೂ ಅರಗಿಸಿಕೊಳ್ಳುತ್ತಾರೆ. ನಂತರ ತಾವು ಏನೂ ತಿಂದೇ ಇಲ್ಲವೇನೋ ಎನ್ನುವಂತೆ, ನೀನು ಮೋಟುಗೋಡೆಯ ಹಿಂದೆ ನಿಲ್ಲುವಂತೆ, ಅವರು ಪಾರ್ಲಿಮೆಂಟಿನ ಗೋಡೆಯ ಆಚೆ ನಿಲ್ಲುತ್ತಾರೆ. ನಿನ್ನಂತೆಯೇ ಅವರೂ ಮುಂದೆ ಬಂದಾಗ ಸೌಮ್ಯವಾಗಿ ವರ್ತಿಸಿ, ಹಿಂದಿನಿಂದ ಝಾಡಿಸಿ ಒದೆಯುತ್ತಾರೆ. ಬಹುತೇಕ ಜನಪ್ರತಿನಿಧಿಗಳು ನಿನ್ನ ಗುಣದವರೇ ಆದುದರಿಂದಲೂ, ಹುಲಿಯಂತಲ್ಲದ ಕತ್ತೆಯಂತಹವರೇ ಮುಖಂಡತ್ವದಲ್ಲಿ ಇರುವುದರಿಂದಲೂ, ಕತ್ತೆಯನ್ನೇ ನ್ಯಾಷನಲ್ ಅನಿಮಲ್ ಮಾಡಬೇಕೆಂಬ ಬಹುಮತ ಕತ್ತೆಮತಿಗಳಿಂದ ಬಂದಿರಬಹುದು ಎನಿಸುತ್ತದೆ"

ಮುಂದಿನ ಪುಟ ನೋಡಿ ...

“ಕಾಗಣ್ಣ, ಏಕೆ ರಾಷ್ಟ್ರಪ್ರಾಣಿ ಮಾಡುವರೆಂಬ ಕಾರಣ ಅತ್ತ ಬಿಡು. ಇದರಿಂದ ನಮ್ಮ ಕುಲಕ್ಕೆ ಕಂಟಕ ಆಗುತ್ತದಲ್ಲಾ, ಅದರ ಬಗ್ಗೆ ಯೋಚಿಸು”

“ನಿಮ್ಮ ಕುಲಕ್ಕೆ ಕಂಟಕ ಹೇಗೆ?”

“ರಾಷ್ಟ್ರಪಕ್ಷಿಯೇ ಆಗಲಿ, ರಾಷ್ಟ್ರಪ್ರಾಣಿಯೇ ಆಗಲಿ, ರಾಷ್ಟ್ರಪಿತನೇ ಆಗಲಿ, ಜನ ಗುಂಡಿಕ್ಕಿ ಕೊಲ್ಲುತ್ತಾರೆ. ಇನ್ನು ನಮ್ಮ ಸಂತತಿ ಅಳಿದಂತೆಯೇ.... ಅಯ್ಯೋ...” ಎನ್ನುತ್ತಾ ಕರ್ಕಶವಾಗಿ ಅಳಲಾರಂಭಿಸಿತು. ಕೂಡಲೆ ಹತ್ತಿರದ ನರ್ಸಿಂಗ್ ಹೋಂ ಪಕ್ಕದ ತೊಟ್ಟಿಯ ಸುತ್ತಲೂ ಹರಡಿರುವ ಕಸದಿಂದ ಹತ್ತಿಯ ಚೂರನ್ನು ಹೆಕ್ಕಿ ಉಂಡೆಯಾಗಿಸಿ ಕಿವಿಗೆ ತುರುಕಿಕೊಳ್ಳುತ್ತಾ, ಕತ್ತೆಗಿಂತಲೂ ಜೋರಿನ ದನಿಯಲ್ಲಿ

“ಈ ನಿರ್ಧಾರಕ್ಕೆ ಅವರು ಬರಲು ನೀನೇ ಕಾರಣ” ಎಂದು ಕಾ-ಕ್ರಂದನಗೈದಿತು.

“ಹೇಗೆ?”

“ಪ್ಲಾಸ್ಟಿಕ್ ತಿನ್ನು; ಸ್ವಚ್ಛ ಭಾರತ್ ಅಭಿಯಾನಕ್ಕೆ ಸೇವೆ ಮಾಡಿದೆ ಎಂದು ಸನ್ಮಾನ ದೊರೆತೀತು. ಹಳೆಯ ಐನೂರು, ಸಾವಿರದ ನೋಟು ತಿನ್ನು. ಮೌಲ್ಯಭರಿತ ಆಹಾರ ತಿಂದೆ ಎಂದು ಪ್ರಶಂಸೆ ಮಾಡಿಯಾರು. ಬಟ್ಟೆ ತಿನ್ನು; ಹೀರೋಯಿನ್‌ಗೆ ಬೇಡವಾದ ಬಟ್ಟೆ ಆಹಾರವಾಗಿ ಸದುಪಯೋಗವಾಯಿತು ಎಂದು ಮೆಚ್ಚಿಯಾರು. ಆದರೆ ನೀನು ಕಾಗದ ತಿಂದೆ. ಅದೂ ಪ್ರಿಂಟೆಂಡ್ ಕಾಗದ.” ಎಂದಿತು ಕಾಗೆ.

“ತಪ್ಪೇನು?”

“ತಪ್ಪಷ್ಟೇ ಅಲ್ಲ; ಆರೋಗ್ಯಕ್ಕೂ ಒಳ್ಳೆಯದಲ್ಲ. ಅದರಲ್ಲಿ ಎಷ್ಟೋ ಬುದ್ಧಿಜೀವಿಗಳ ಬರಹಗಳು ಇದ್ದವು.”

“ಓಹ್! ಅದಕ್ಕೇ ಅಷ್ಟೊಂದು ಹೊಟ್ಟೆನೋವು! ಕಾಗದ ತಿಂದಂದಿನಿಂದ ಹೊಟ್ಟೆ ನುಲಿಯುತ್ತಲೇ ಇದೆ. ನನ್ನ ಪೂರ್ವಜರು ಅದು ಹೇಗೆ ಸಾಹಿತ್ಯ ತಿಂದು ಜೀರ್ಣಿಸಿಕೊಳ್ಳುತ್ತಿದ್ದರೋ ಏನೋ...”

“ನಿನ್ನ ಪೂರ್ವಜರು ಸಾಹಿತ್ಯ ತಿನ್ನುತ್ತಿದ್ದರೆ?”

“ಹೂಂ. ನಾಟಕದ ಕಂಪನಿಯೊಂದರಲ್ಲಿ ಪ್ಯಾರಿ ಎಂಬುವಳನ್ನು ಹೀರೋಯಿನ್ ಮಾಡಬೇಕೆಂಬ ಆಸೆಯಿಂದ ಅವಳಿಗೆ ಡೈಲಾಗ್ ಹೇಳಿಕೊಡಲು ಮೇಷ್ಟ್ರೊಬ್ಬರನ್ನು ಕರೆಸಿದರು. ಏನೇ ಆದರೂ ಪ್ಯಾರಿ ಡೈಲಾಗ್ ಕಲಿಯಲಿಲ್ಲ. ಪ್ಯಾರಿ ಕಲಿಕೆಯ ಆಯಾಸದಿಂದ ಮಲಗಲು ಹೋದಳು. ಮೇಷ್ಟ್ರು ಹೇಳಿಕೊಟ್ಟ ದಣಿವಾರಿಸಿಕೊಳ್ಳಲು ಹೊರಹೋದರು. ಅಷ್ಟರಲ್ಲಿ ಕತ್ತೆಯೊಂದು ಒಳಬಂದು ಪ್ಯಾರಿಗೆ ಹೇಳಿಕೊಡುತ್ತಿದ್ದ ಸ್ಕ್ರಿಪ್ಟನ್ನು ತಿಂದುಬಿಟ್ಟಿತು. ಪ್ಯಾರಿಯ ಬಾಯಿಗೆ ಬರದ ಮಾತುಗಳು ಕತ್ತೆಯ ಬಾಯಲ್ಲಿ ಸರಾಗವಾಗಿ ಬರುತ್ತಿದ್ದವು ಎಂದು ಬೀಚಿಯವರೇ ನುಡಿದಿದ್ದಾರೆ. ಅದೂ ಎಂತಹ ಕನ್ನಡ! ಕಬ್ಬಿಣದ ಕಡಲೆ ಎನ್ನಿಸುವಂತಹ ಹಳೆಗನ್ನಡ” ಎಂದಿತು ಕತ್ತೆ.

“ಆಗಿನದು ಒಂದೇ ವಿಧದ ಸಾಹಿತ್ಯ - ಸತ್ವಯುತ ಸಾಹಿತ್ಯ. ಆದ್ದರಿಂದ ಜೀರ್ಣವಾಗುತ್ತಿತ್ತು.”

“ಈಗಿನದು?”

“ಗಾದಿ ಸಾಹಿತ್ಯ, ಹಾದಿ ಸಾಹಿತ್ಯ, ರದ್ದಿ ಸಾಹಿತ್ಯ, ರಾಡಿ ಸಾಹಿತ್ಯ, ಬೀಡಿ ಸಾಹಿತ್ಯ, ಲೋಟದ ಸಾಹಿತ್ಯ, ಪ್ಯಾಕೆಟ್ ಸಾಹಿತ್ಯ, ಬಕೆಟ್ ಸಾಹಿತ್ಯ....”

“ಸಾಕು ನಿಲ್ಲಿಸು. ಸಾಹಿತ್ಯದ ವಿಷಯ ಅತ್ತ ಬಿಡು. ನಮ್ಮ ಕುಲಕ್ಕೆ ಬಂದ ಕಂಟಕವನ್ನು ಬಗೆಹರಿಸುವ ಉಪಾಯವನ್ನು ಹೇಳು”

“ಪಾರ್ಲಿಮೆಂಟಿನಲ್ಲಿ ಯಾರಾದರೂ ಪರಿಚಯ ಇದ್ದಾರಾ?”

“ಇಲ್ಲದೆ ಏನು? ಅಲ್ಲಿರುವ ಬಹಳ ಜನ ನಮ್ಮ ಬಂಧುಗಳೇ”

“ಓಹ್! ಹೌದಲ್ಲವೇ! ಕುದುರೆಗಳು ನಿಮ್ಮ ಕಸಿನ್ಸ್ ಅಲ್ಲವೇ... ಪಾರ್ಲಿಮೆಂಟಲ್ಲಿ ಹಾರ್ಸ್ ಟ್ರೇಡಿಂಗ್ ನಡೆಯುವ ಸಮಯ ನೋಡಿಕೊಂಡು, ಅವರ ಮೂಲಕ ನಿನ್ನ ಕೆಲಸ ಮಾಡಿಸಿಕೊಳ್ಳಲು ಟ್ರೈ ಮಾಡಿದರೆ ಹೇಗೆ?”

“ಆಗಲ್ಲ. ಬರ್ತಾ ಬರ್ತಾ ಪಾರ್ಲಿಮೆಂಟ್ ಕುದುರೆಗಳೆಲ್ಲ ಕತ್ತೆಗಳಾಗಿಬಿಟ್ಟಿವೆ.”

“ಸೂಪರ್. ಗಾದೇನೇ ಇದೆಯಲ್ಲ, ಕಾರ್ಯವಾಸಿ ಕತ್ತೆಕಾಲು ಕಟ್ಟು ಅಂತ. ನಿನ್ನ ರಿಲೇಟಿವ್ ಡಾಂಕೀಸ್ ಮೂಲಕವೇ ಟ್ರೈ ಮಾಡಿ ರಾಷ್ಟ್ರಪ್ರಾಣಿ ಟ್ಯಾಗ್ ಕ್ಯಾನ್ಸಲ್ ಮಾಡಿಸಿಕೊ”

“ಆಗಲ್ಲ”

“ಯಾಕೆ?”

“ಜಾತ್ ಕೋ ಜಾತ್ ದುಷ್ಮನ್. ಅಂದಹಾಗೇ, ಕಾಗಣ್ಣ. ಕಂಗ್ರಾಜುಲೇಶನ್ಸ್”

“ಏಕೆ?”

ಮುಂದಿನ ಪುಟ ನೋಡಿ ...

“ನಿನ್ನನ್ನು ರಾಷ್ಟ್ರಪಕ್ಷಿಯಾಗಿ ಆರಿಸಲಾಗುವುದಂತೆ”

“ನಾನು... ರಾಷ್ಟ್ರಪಕ್ಷಿಯೇ....? ಕತ್ಯಣ್ಣ, ವಿಷ ಹಾಕಿ ಸಾಮೂಹಿಕವಾಗಿ ನವಿಲುಗಳನ್ನು ಕೊಂದಂತೆ ನಮ್ಮನ್ನೂ ಕೊಲ್ಲಲು ಈ ಹುನ್ನಾರವೆ? ಕರೆಂಟಿಲ್ಲದ ವೈರುಗಳ ಮೇಲೆ ನಮ್ಮ ಪಾಡಿಗೆ ಸಭೆ ನಡೆಸಿಕೊಂಡಿರುವ ನಮ್ಮ ಮೇಲೇಕೆ ಗೃಧ್ರದೃಷ್ಟಿ? ಧಿಕ್ಕಾರವಿರಲಿ. ಕಾಕಾಕಾಕಾ” ಎಂದು ಅರಚಿತು.

ಎಲ್ಲ ದಿಕ್ಕುಗಳಿಂದಲೂ ಕಾಗೆಗಳು ಹಾರಿಬಂದವು.

“ಕತ್ಯಣ್ಣ, ನಿನಗೆ ಒದೆಯಲು ಅನುಕೂಲಕರವಾದ ರಿವರ್ಸ್ ಗೇರ್ನಲ್ಲಿ ನೀನು ಹೊರಡು. ಕಾಕಬಂಧುಗಳೆ, ಅದೋ ಆ ಬಂಡೆಗೆ ನಿಮ್ಮ ಕೊಕ್ಕುಗಳನ್ನು, ಪಂಜಾಗಳನ್ನು ಉಜ್ಜಿಕೊಂಡು ಚೂಪು ಮಾಡಿಕೊಳ್ಳಿ. ಗಂಟಲುಗಳನ್ನು ಅರಚುವುದಕ್ಕೆ ತಕ್ಕಷ್ಟು ಕರ್ಕಶ ಮಾಡಿಕೊಳ್ಳಿ. ಹಾರಿರಿ ನಮ್ಮ ಪ್ರಾಣಕ್ಕೆ ಸಂಚಕಾರ ತರುವವರ ಕಡೆಗೆ... ಅಟ್ಯಾಕ್.... ಕ್ರಾಕ್ರಾಕ್ರಾ...” ಎನ್ನುತ್ತಾ ಧಿಕ್ಕಾರ, ಧರಣಿ, ಸತ್ಯಾಗ್ರಹಗಳಿಗೆಂದೇ ಸೀಮಿತವಾದ ಟೌನ್‌ಹಾಲ್‌ನ ಮುಂಬಾಗಧ ಮೆಟ್ಟಿಲುಗಳತ್ತ ಧಾವಿಸಿದವು. ▪



ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಟೊಮೇಟೊ: ಹಣ್ಣೋ, ತರಕಾರಿಯೋ?

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ತನಗೆ ಸರಿಯಾದ ಸ್ಥಾನಮಾನ ದೊರಕಿಲ್ಲ ಎಂದು ಯುನೈಟೆಡ್ ಸ್ಟೇಟ್ಸ್ ನ ಅಗ್ರಿಕಲ್ಚರ್ ಡಿಪಾರ್ಟ್ಮೆಂಟ್ ಅನ್ನು ಕೋರ್ಟಿಗೆಳೆದ ಆಹಾರ ಪದಾರ್ಥ ಟೊಮೇಟೊ. ಇದು ಹಣ್ಣೋ, ತರಕಾರಿಯೋ? ಎಂದು ಕೋರ್ಟು ತೀರ್ಮಾನಿಸಬೇಕಾಗುತ್ತದೆ. ಏಕೆಂದರೆ 1887 ರಲ್ಲಿ ಯುನೈಟೆಡ್ ಸ್ಟೇಟ್ಸ್, ತರಕಾರಿಗಳಿಗೆ ಸುಂಕ ಹಾಕಲು ಆರಂಬಿಸಿತು. ಆದರೆ ಹಣ್ಣುಗಳಿಗೆ ಸುಂಕವಿರಲಿಲ್ಲ. ಸಸ್ಯಶಾಸ್ತ್ರೀಯವಾಗಿ ಇದು ಹಣ್ಣುಗಳ ಗುಂಪಿಗೆ ಸೇರಿದ್ದರಿಂದ ಟೊಮೇಟೊ ಬೆಳೆಗಾರರು ಟೊಮೇಟೊಗೆ ಸುಂಕ ಹಾಕಬಾರದು ಎಂದು ಈ ವಾದವನ್ನು ಕೋರ್ಟಿಗೆ ಒಯ್ದರು. ಬೆಳೆಗಾರರು ಕೊಟ್ಟ ಕಾರಣಗಳು: ಸಕ್ಕರೆ (2.2%) ಇರುವುದರಿಂದ ಹಣ್ಣಿನಂತೆ ಸವಿಯಬಹುದು. ಸೇಬು, ದ್ರಾಕ್ಷಿ, ಎಪ್ರಿಕಾಟ್ ಹಣ್ಣಿನಂತೆ ಟೊಮೇಟೊವನ್ನು ಕೂಡ ಒಣಗಿಸಿ ಬಹಳ ದಿನಗಳ ಕಾಲ ಕೆಡದಂತೆ ಇಡಬಹುದು. ಇತರ ಹಣ್ಣಿನ ರಸದಂತೆ ಟೊಮೇಟೊ ರಸವನ್ನು ಸವಿಯಬಹುದು. ಅಂಗಡಿಗಳಲ್ಲಿ ಫ್ರೂಟ್ ಜ್ಯೂಸ್ ನಂತೆ ಟೊಮೇಟೊ ರಸವನ್ನು ಕೂಡ ಡಬ್ಬಗಳಲ್ಲಿ ಮತ್ತು ಕಾರ್ಟನ್ ಗಳಲ್ಲಿ ಮಾರುತ್ತಾರೆ. 1893 ರಲ್ಲಿ ಯುನೈಟೆಡ್ ಸ್ಟೇಟ್ಸ್ ಸುಪ್ರೀಂ ಕೋರ್ಟ್, ಟೊಮೇಟೊ ತರಕಾರಿ ಎಂದು ತೀರ್ಮಾನಿಸಿತು. ಕೋರ್ಟ್ ಕೊಟ್ಟ ಮುಖ್ಯ ಕಾರಣ: ಟೊಮೇಟೊಗಳನ್ನು ಅನೇಕ ಬಗೆಯ ಊಟ ತಿಂಡಿಗಳನ್ನು ತಯಾರಿಸಲು ತರಕಾರಿಯಂತೆ ಉಪಯೋಗಿಸುತ್ತಾರೆ; ಊಟದ (dinner) ನಂತರ ಸೇವಿಸುವ ಸಿಹಿ ತಿನಿಸು (dessert) ತಯಾರಿಸಲು ಅಲ್ಲ ಎಂದು. ಈ ಕೇಸು Nix v. Hedden ಎಂದು ದಾಖಲಾಗಿದೆ.

ಆದರೆ ಕನ್ನಡದಲ್ಲಿ ಈ ವಿವಾದವಿಲ್ಲ. ಕೆಂಪು ಬಣ್ಣವಿದ್ದರೆ ಟೊಮೇಟೊ ಹಣ್ಣು, ಹಸಿರಾಗಿದ್ದರೆ ಟೊಮೇಟೊ ಕಾಯಿ ಎಂದು ಕರೆಯುತ್ತೇವೆ. ಬಿ.ಜಿ.ಎಲ್. ಸ್ವಾಮಿಯವರ 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ' ಪುಸ್ತಕದಲ್ಲಿ ಟೊಮೇಟೊ ಬಗ್ಗೆ ಸ್ವಾರಸ್ಯಕರವಾದ ಲೇಖನವಿದೆ.
ಇದರ ತವರು ದಕ್ಷಿಣ ಅಮೇರಿಕಾ. 19 ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಟೊಮೇಟೊ ಹಣ್ಣನ್ನು ದೈನಂದಿನ ಆಹಾರವಾಗಿ ಬಳಸುವ ವಾಡಿಕೆ ಪ್ರಾರಂಭವಾಯಿತು. ಆಗ ಭಾರತಕ್ಕೆ ಬರುತ್ತಿದ್ದ ಇಂಗ್ಲೀಷಿನವರೊಂದಿಗೆ ಟೊಮೇಟೊ ಕೂಡ ಭಾರತಕ್ಕೆ ಕಾಲಿಟ್ಟಿತು. ಟೊಮೇಟೊ ಬೆಳೆಯುವಲ್ಲಿ ಚೈನಾ ಮೊದಲನೆಯ ಸ್ಥಾನದಲ್ಲಿದೆ. ಇಂಡಿಯಾ ಎರಡನೆಯ ಸ್ಥಾನ ಪಡೆದಿದೆ.

7500 ಬಗೆಯ ಟೊಮೇಟೊಗಳಿವೆ, ಅದರಲ್ಲಿ 'Bangalore variety' ಕೂಡ ಒಂದು ಎಂದರೆ ನಿಮಗೆ ಅಚ್ಚರಿಯಾಗಬಹುದು. ಟೊಮೇಟೊ ಹಣ್ಣಿನ ಬಣ್ಣ, ಅಳತೆ, ಆಕಾರ ಬಗೆ ಬಗೆಯವು. ಕೆಲವು ಹೆಸರುಗಳಂತೂ ಚಿತ್ರ ವಿಚಿತ್ರವಾಗಿವೆ - 'ಸ್ಲೈಸಿಂಗ್' ಟೊಮೇಟೊ, ಬೀಫ್-ಸ್ಟೇಕ್ ಟೊಮೇಟೊ, ಆಕ್ಸ್-ಹಾರ್ಟ್ ಟೊಮೇಟೊ, ನ್ಯೂ ಗರ್ಲ್, ಜೆಟ್ ಸ್ಟಾರ್, ಫ್ಯಾನ್ಟಾಸ್ಟಿಕ್', ಫಸ್ಟ್ ಲೇಡಿ ಇತ್ಯಾದಿ. ಪ್ಲಮ್, ಪೇರ್, ಚೆರ್ರಿ, ಗ್ರೇಪ್ ಟೊಮೇಟೊಗಳನ್ನು ನೀವು ಸವಿದಿರಬಹುದು.

ಆರೋಗ್ಯದಾಯಕ ಗುಣಗಳು

ವಿಟಮಿನ್ C, ವಿಟಮಿನ್ A, ಪೊಟ್ಯಾಸಿಯಂ ಮುಂತಾದ ಹಲವಾರು ಪೋಷಕಾಂಶಗಳನ್ನು ಹೆಚ್ಚು ಪ್ರಮಾಣದಲ್ಲಿ ಹೊಂದಿರುವ ಟೊಮೇಟೊ ಒಂದು ಉತ್ಕೃಷ್ಟ ಆಹಾರ. ಮುಖ್ಯವಾಗಿ ದೇಹರಕ್ಷಕ ಆಂಟಿಆಕ್ಸಿಡೆಂಟ್ ಲೈಕೊಪೀನ್ (lycopene) ಅನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಹೊಂದಿದೆ. ಇತರ ಆಂಟಿಆಕ್ಸಿಡೆಂಟ್ ಗಳಾದ ವಿಟಮಿನ್ A, C ಮತ್ತು E ಗಿಂತ ಲೈಕೊಪೀನ್ ಹೆಚ್ಚು ಪ್ರಭಾವಶಾಲಿ. ನೂರಾರು ಸಂಶೋಧನೆಗಳಿಂದ, ಅಧ್ಯಯನಗಳಿಂದ ಸಾಬೀತಾಗಿರುವುದೇನೆಂದರೆ - ದಿನನಿತ್ಯ ಟೊಮೇಟೊ ಸೇವನೆ ಹೃದಯರೋಗಗಳನ್ನು ತಡೆಹಿಡಿಯುತ್ತದೆ, ಸೂರ್ಯ ಕಿರಣಗಳಿಂದ ಚರ್ಮಕ್ಕಾಗುವ ಹಾನಿಯನ್ನು ತಡೆಹಿಡಿಯುತ್ತದೆ ಎಂದು. ಮೂಳೆಗಳ ಮತ್ತು ಮೆದುಳಿನ ಆರೋಗ್ಯಕ್ಕೆ, ಟೊಮೇಟೊ ಸೇವನೆ ಬಹು ಮುಖ್ಯ. ಟೊಮೇಟೊ ಮತ್ತು ಟೊಮೇಟೊ ಉತ್ಪನ್ನಗಳನ್ನು ಬಳಸುವುದರಿಂದ ಕ್ಯಾನ್ಸರ್ ನ ಅದರಲ್ಲೂ ಪ್ರಾಸ್ಟೇಟ್ ಕ್ಯಾನ್ಸರ್ ನ ಅಪಾಯವನ್ನು ಕಡಿಮೆಗೊಳಿಸಬಹುದು ಎಂದು ಹಲವಾರು ಸಂಶೋಧನೆಗಳಿಂದ, ಅಧ್ಯಯನಗಳಿಂದ ಸಾಬೀತಾಗಿದೆ. ಟೊಮೇಟೊ ಉತ್ಪನ್ನಗಳು ರಕ್ತನಾಳಗಳ ಉರಿಯೂತವನ್ನು ಮತ್ತು ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದನ್ನು ತಡೆಯುತ್ತದೆ. ರಕ್ತ ಹೆಪ್ಪುಗಟ್ಟಿದರೆ ರಕ್ತ ಪರಿಚಲನೆಗೆ ತೊಂದರೆ ಉಂಟಾಗುತ್ತದೆ. ದೇಹದ ಯಾವ ಭಾಗಗಳೂ, ಕಾಲಿನಿಂದ ತಲೆಯವರೆಗೆ ಸುಗಮವಾಗಿ ಕೆಲಸ ಮಾಡಲು ರಕ್ತ ಒದಗುವುದಿಲ್ಲ. ದೇಹದ ಎಲ್ಲ ಭಾಗಗಳಿಗೆ ರಕ್ತ ಒದಗಿಸುವ ಹೃದಯಕ್ಕೆ ರಕ್ತ ಸರಿಯಾಗಿ ಸಿಗದಿದ್ದರೆ ಏನಾಗಬಹುದು? ಒಟ್ಟಿನಲ್ಲಿ, ಟೊಮೇಟೊ ಪ್ರಕೃತಿ ಒದಗಿಸಿದ ಅತ್ಯಂತ ಪ್ರಭಾವಶಾಲಿ ಪೋಷಕಾಂಶಗಳ ಮಾತ್ರೆ (multivitamin tablet) ಎಂದು ಹೇಳಬಹುದು.

ಮುಂದಿನ ಪುಟ ನೋಡಿ ...

ಉಪಯೋಗಿಸುವುದು ಹೇಗೆ?

ಯಾವುದಾದರೂ ಕೊಳೆತ ಆಹಾರ ಪದಾರ್ಥ ಉಪಯೋಗಕ್ಕೆ ಬರುತ್ತದೆ, ಮಾರಾಟವಾಗುತ್ತದೆ ಅಂದರೆ ಕೊಳೆತ ಟೊಮೇಟೊ ಒಂದೇ. ರಾಜಕಾರಿಣಿಗಳು ಭಾಷಣ ಮಾಡುವಾಗ ಸಭಿಕರು ಕೊಳೆತ ಟೊಮೇಟೊ ಎಸಿಯುವುದನ್ನು ಕೇಳಿರುತ್ತೀರಿ. ನೋಡಿರಲೂಬಹುದು. 19 ನೇ ಶತಮಾನದಲ್ಲಿ, ಯೋರೋಪಿನಲ್ಲಿ ಪ್ರದರ್ಶನ ಕಳಪೆಯಾಗಿದ್ದರೆ ಕಲಾಕಾರರ ಮೇಲೆ ಕೊಳೆತ ಟೊಮೇಟೊ ಎಸೆಯುವ ಸಂಪ್ರದಾಯ ರೂಢಿಯಲ್ಲಿತ್ತಂತೆ. ಈ ದಿನಗಳಲ್ಲಿ 'throwing rotten tomatoes' ಎಂಬುದನ್ನು metaphor ಆಗಿ ಬಳಸುತ್ತಾರಂತೆ. ಆದರೆ ನಮ್ಮ ಭಾರತದಲ್ಲಿ ಈ ಅಭ್ಯಾಸ/ಚಾಳಿ ಈಗಲೂ ಇರಬಹುದು.

ಕೀನ್ವಾ, ಚಿಯಾ ಬೀಜಗಳು, ಗೋಜಿ ಬೆರ್ರಿ ಮುಂತಾದ ನಮ್ಮಲ್ಲಿ ಬಳಕೆಯಲ್ಲಿಲ್ಲದ ಆಹಾರ ಪದಾರ್ಥಗಳಿಗೆ 'ಸೂಪರ್ ಫುಡ್ಸ್' ಎಂದು ಹೆಸರು ಕೊಟ್ಟು ಮಾರಾಟ ಹೆಚ್ಚಿಸಿ ದುಡ್ಡು ಮಾಡಿಕೊಳ್ಳುತ್ತಾರೆ. ಆದರೆ ಟೊಮೇಟೊ ನೀಡುವ ಆರೋಗ್ಯರಕ್ಷಕ ಪೋಷಕಾಂಶಗಳು ಇವ್ಯಾವ ಸೂಪರ್ ಫುಡ್ಸ್ ಗಳಲ್ಲೂ ಇಲ್ಲ. ಅಲ್ಲದೆ ಟೊಮೇಟೊ ಬೆಲೆ ಅಗ್ಗ. ಮೆಡಿಟೆರೇನಿಯನ್ ಮತ್ತು ಮಧ್ಯಪೂರ್ವ ದೇಶಗಳ ಅನೇಕಾನೇಕ ಅಡಿಗೆಗಳಲ್ಲಿ ಟೊಮೇಟೊ ಬಹು ಮುಖ್ಯ ಪಾತ್ರವಹಿಸುತ್ತದೆ. ನಾವು, ಟೊಮೇಟೊ ಹಣ್ಣು ಮತ್ತು ಕಾಯಿಯಿಂದ ಅನೇಕ ಬಗೆಯ ಆಹಾರಗಳನ್ನು ತಯಾರಿಸುತ್ತೇವೆ. ಉದಾಹರಣೆಗೆ: ಟೊಮೇಟೊ ಬಾತ್, ಟೊಮೇಟೊ ಸಾರು/ರಸಂ, ಚಟ್ನಿ, ಮೊಸರು ಬಜ್ಜಿ, ಸಾಗು, ಸಲಾಡ್, ಸೂಪ್, ಸಾಸ್ ಇತ್ಯಾದಿ. ಅಲ್ಲದೆ ನಾವು ಮಾಡುವ ಎಲ್ಲಾ ಅಡುಗೆಗಳಿಗೂ ಟೊಮೇಟೊ ಉಪಯೋಗಿಸಬಹುದು. ನೀವು ಯಾವ ತರಕಾರಿಯ ಪಲ್ಯವನ್ನೇ ಮಾಡಿ, ಅದಕ್ಕೊಂದು ಟೊಮೇಟೊ ಹಾಕಿ. ನೀರು ಹಾಕದೆ ಟೊಮೇಟೊ ರಸದಲ್ಲೇ ತರಕಾರಿಯನ್ನು ಬೇಯಿಸಬಹುದು. ಸಾಂಬಾರ್ ಗೆ ಯಾವ ತರಕಾರಿಯನ್ನೇ ಹಾಕಿ, ಒಂದೆರಡು ಟೊಮೇಟೊ ಹೆಚ್ಚಿ ಹಾಕಿ. ಅಥವಾ ಮಸಾಲೆ ರುಬ್ಬುವಾಗ ಒಂದೆರಡು ಟೊಮೇಟೊ ಹಾಕಿ. ಉಪ್ಪಿಟ್ಟು, ಅವಲಕ್ಕಿ, ಬೇಲ್ ಪುರಿ ಮುಂತಾದ ಎಲ್ಲಾ ತರದ ಊಟ ತಿಂಡಿಗಳೂಡನೆ ಚೆನ್ನಾಗಿ ಹೊಂದಿಕೊಳ್ಳುತ್ತದೆ ಈ versatile ಟೊಮೇಟೊ. ಅಲ್ಲದೆ ಚೆರ್ರಿ ಮತ್ತು ಗ್ರೇಪ್ ಟೊಮೇಟೊ ಹಣ್ಣುಗಳನ್ನು ಕಡ್ಲೇಕಾಯಿ, ದ್ರಾಕ್ಷಿಹಣ್ಣು ತಿನ್ನುವಂತೆ ತಿನ್ನಬಹುದು (nature's fast food). ನಾವು ಬದನೇಕಾಯಿ ಬಜ್ಜಿ ಮಾಡುವಂತೆ, ಟೊಮೇಟೊ ಕಾಯಿಯನ್ನು ಸೀಳಿ, ಹಿಟ್ಟಿನಲ್ಲಿ ಅದ್ದಿ, ಎಣ್ಣೆಯಲ್ಲಿ ಕರಿದ ತಿಂಡಿ ದಕ್ಷಿಣ ಅಮೇರಿಕಾದಲ್ಲಿ ಬಹು ಜನಪ್ರಿಯವಾಗಿತ್ತಂತೆ. ಟೊಮೇಟೊ ಪಾಯಸ ಮಾಡುವುದನ್ನು ಮಾತ್ರ ನಮ್ಮವರು ಯೋಚಿಸಿಲ್ಲ ಎಂದು 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ' ಪುಸ್ತಕದಲ್ಲಿ ಬಿ.ಜಿ.ಎಲ್. ಸ್ವಾಮಿಯವರು ಹಾಸ್ಯ ಮಾಡುತ್ತಾರೆ. ಆದರೆ ನಾನು ಟೊಮೇಟೊ ಹಲ್ವ ಮಾಡುವುದನ್ನು ಕೇಳಿದ್ದೇನೆ.

ಭಾರತದಿಂದ ಉಪ್ಪಿನಕಾಯಿ, ಚಟ್ನಿ, ಜಾಮ್, ಕೆಚಪ್ ಮುಂತಾದ ಅನೇಕ ಟೊಮೇಟೊ ಉತ್ಪನ್ನಗಳು ಹೊರ ದೇಶಗಳಿಗೆ ರಫ್ತಾಗುತ್ತವೆ. ಟೊಮೇಟೊ ಬಾಡಿ ವಾಶ್, ಟೊಮೇಟೊ ಫೇಸ್ ಪ್ಯಾಕ್ ಮುಂತಾದ ಅನೇಕ ಸೌಂದರ್ಯವರ್ಧಕಗಳನ್ನು ತಯಾರಿಸಲು ಟೊಮೇಟೊ ಉಪಯೋಗಿಸುತ್ತಾರೆ. ನಾನು ಹೇಳುವುದೇನೆಂದರೆ, ದಿನಕ್ಕೊಂದು ಟೊಮೇಟೊ ಸೇವಿಸಿ, ಚರ್ಮ ಒಂದೇ ಅಲ್ಲ. ಇಡೀ ದೇಹ ಆರೋಗ್ಯದಿಂದ ಕಂಗೊಳಿಸುತ್ತದೆ ಎಂದು.

ಹತ್ತು ನಿಮಿಷಗಳಲ್ಲಿ ತಯಾರಾಗುವ ಟೊಮೇಟೊ ಸಾಸ್

ಬೇಕಾಗುವ ಸಾಮಾನುಗಳು

2 ಟೇಬಲ್ ಚಮಚೆ ನೀರು,
1/2 ಲೋಟ ಸಣ್ಣಗೆ ಹೆಚ್ಚಿದ ನೀರುಳ್ಳಿ
1/2 ಕೆ.ಜಿ ಟೊಮೇಟೊ ಹಣ್ಣು
2 ಹಿಳುಕು ಬೆಳ್ಳುಳ್ಳಿ
1 ಟೀ ಚಮಚೆ ಜೇನುತುಪ್ಪ
2 ಟೇಬಲ್ ಚಮಚೆ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು
3 ಟೇಬಲ್ ಚಮಚೆ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ
3 ಟೇಬಲ್ ಚಮಚೆ ಸಣ್ಣಗೆ ಹೆಚ್ಚಿದ ಸಿಹಿ ತುಳಸಿ ಎಲೆ
ರುಚಿಗೆ ತಕ್ಕಷ್ಟು ಕಲ್ಲುಪ್ಪು ಮತ್ತು ಕರಿಮೆಣಸಿನಪುಡಿ ಅಥವಾ ಕೆಂಪುಮೆಣಸಿನಕಾಯಿ ಪುಡಿ

ಮಾಡುವ ವಿಧಾನ

ನೀರುಳ್ಳಿ, ಬೆಳ್ಳುಳ್ಳಿ ಮತ್ತು ಟೊಮೇಟೊ ಹಣ್ಣನ್ನು ಸಣ್ಣಗೆ ಹೆಚ್ಚಿಡಿ. ನೀರು ಕಾಯಿಸಿ, ಅದಕ್ಕೆ ನೀರುಳ್ಳಿ ಹಾಕಿ, ಬೇಯಿಸಿ. ನೀರು ಇಂಗಿದ ಮೇಲೆ ಟೊಮೇಟೊ, ಬೆಳ್ಳುಳ್ಳಿ, ಜೇನುತುಪ್ಪ, ಕೊತ್ತಂಬರಿ ಸೊಪ್ಪು, ಉಪ್ಪು, ಕರಿಮೆಣಸಿನಪುಡಿ ಹಾಕಿ ಸಣ್ಣ ಉರಿಯಲ್ಲಿ ಟೊಮೇಟೊವನ್ನು ಚೆನ್ನಾಗಿ ಬೇಯಿಸಿ. ಒಲೆಯಿಂದ ಕೆಳಗಿಳಿಸಿ ಎಕ್ಸ್ಟ್ರಾ ವರ್ಜಿನ್ ಆಲಿವ್ ಎಣ್ಣೆ ಮತ್ತು ತುಳಸಿ ಎಲೆ ಹಾಕಿ ಚೆನ್ನಾಗಿ ಮಸೆಯಿರಿ. ಇದನ್ನು ಒಂದೆರಡು ವಾರಗಳ ಕಾಲ ರೆಫ್ರಿಜರೇಟರ್ ನಲ್ಲಿ ಇಡಬಹುದು.

ಕೊನೆಮಾತು: ಆಹಾರವೇ ನಿಮಗೆ ಔಷಧಿಯಾಗಲಿ, ದಿನಕ್ಕೊಂದು ಟೊಮೇಟೊ ಬಳಸಿ, ಔಷಧಿಯನ್ನು ಸವಿಯಿರಿ. ▪

ಸೀಮೆ ಬದನೆ

ಕನಕಾಪುರ ನಾರಾಯಣ



ಹಳ್ಳಿಯ ರೈತನೊಬ್ಬ ಸೀಮೆ ಬದನೆ ಕಾಯಿ ಬೆಳೆಯುವುದರಲ್ಲಿ ನಿಸ್ಸೀಮನೆನೆಸಿದ್ದ, ಪಕ್ಕದೂರಿನ ಜಾತ್ರೆಯಲ್ಲಿ ಬೆಳೆಗಾರರ ಸ್ಪರ್ಧೆಯಲ್ಲಿ ಪ್ರತಿ ವರ್ಷ ಅವನದ್ದೇ ಜಯ,ಮೊದಲ ಬಹುಮಾನ. ಆತ ತನ್ನ ಅಕ್ಕಪಕ್ಕದ ರೈತರಿಗೂ ತಾನು ಬೆಳೆದ ಥಳಿಯ ಸೀಮೆ ಬದನೆ ಹಂಚುತ್ತಿದ್ದ ಅವರೂ ಅದೇ ಜಾತಿಯ ಬಳ್ಳಿ ಬೆಳೆದು ಫಲ ಮಾರಿ ಚೆನ್ನಾಗೇ ಹಣ ಮಾಡುತ್ತಿದ್ದರು. ಒಬ್ಬ ಸ್ನೇಹಿತ ಇದನ್ನು ಗಮನಿಸಿ ಆ ರೈತನನ್ನು ಕೇಳಿದ " ಅಯ್ಯಾ ನೀನು ಬೆಳೆದ ಉತ್ತಮ ಜಾತಿಯ ಕಾಯಿಗಳನ್ನೇ ಅಕ್ಕಪಕ್ಕದವರಿಗೂ ಕೊಡುವೆಯಲ್ಲಾ, ಅವರೂ ಸ್ಪರ್ಧೆಗೆ ಬಂದು ಗೆದ್ದರೆ? ಎಂದು ಕೇಳಿದ. ಅದಕ್ಕೆ ಆ ಜಾಣ ರೈತ" ಅವರೆಲ್ಲಾ ಸಣ್ಣ ಪುಟ್ಟ ರೈತರು, ಅವರಿಗೆ ಸ್ಪರ್ಧೆಗೆ ಬರುವಷ್ಟು ಆಸಕ್ತಿ ಇಲ್ಲ, ಅವರೂ ಇದೇ ಒಳ್ಳೆಯ ಜಾತಿಯ ಬೆಳೆ ಬೆಳೆಯುವುದರಿಂದ ಸುತ್ತಲೂ ಇರುವ ಉತ್ತಮ್ಮ ಹೂಗಳಿಂದ ಪರಾಗ ಸ್ಪರ್ಶವಾಗಿ ಒಳ್ಳೆ ಫಲ ನನ್ನದಾಗಿದೆ" ಎಂದು ತನ್ನ ಗೆಲುವಿನ ರಹಸ್ಯ ಹೇಳಿದ. ▪

ರೆಸಿಪಿ ಕೊಡ್ತೀರಾ!

ಬಾಳೆಹಣ್ಣಿನ ಹಲ್ವ

ಬೇಕಾಗುವ ಸಾಮಗ್ರಿಗಳು

- 10-12 ಬಾಳೇಹಣ್ಣು , ಒಂದು ಬಟ್ಟಲು ಶುದ್ಧ ತುಪ್ಪ
- ಟೀ ಚಮಚ ಏಲಕ್ಕಿ ಪುಡಿ, ಅರ್ಧ ತೆಂಗಿನ ಕಾಯಿ
- ಒಂದು ಬಟ್ಟಲು ಸಕ್ಕರೆ

ಮಾಡುವ ವಿಧಾನ

- ಬಾಳೇಹಣ್ಣು ಸಿಪ್ಪೆ ಸುಲಿದು ಚೆನ್ನಾಗಿ ಹಿಸುಕಿರಿ
- ಬಾಣಲೆಯಲ್ಲಿ 3 ಚಮಚ ತುಪ್ಪ ಕಾಯಿಸಿ ಬಾಳೆಹಣ್ಣನ್ನು ಹಾಕಿ ಗರಿಗರಿಯಾಗುವ ವರೆಗೂ ಬೇಯಿಸಿ
- ತೆಂಗಿನ ಕಾಯಿತುರಿ,ಸಕ್ಕರೆ ಸೇರಿಸಿ,ತುಪ್ಪವನ್ನು ಸ್ವಲ್ಪಸ್ವಲ್ಪವಾಗಿ ಸೇರಿಸಿ
- ಎಲ್ಲವನ್ನೂ ಕಂದು ಬಣ್ಣ ಬರುವವರೆಗೂ ತಿರುವುತ್ತಿದ್ದು ಸುವಾಸನೆ ಬಂದಮೇಲೆ ಏಲಕ್ಕಿಪುಡಿ ಸೇರಿಸಿ ಒಲೆ ಆರಿಸಿ
- ಬಿಸಿ ಇರುವಾಗಲೇ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪೆಗಳಿಗೆ **www.sugamakannada.com** ಗೆ ಭೇಟಿಕೊಡಿ.

ಒಗಟು

೧. ನೋಡಿದರೆ ಮಲ್ಲಿಗೆ ಹೂ , ಕೈಲಿ ತಕ್ಕಂಡು ಮುಟ್ಟೋಕ್ಕೆ ಆಗೋದಿಲ್ಲ

೨. ಕೆಂಪು ಹೆಣ್ಣಿನ ತುಟಿ ಕರೀಗಿದೆ

ಉತ್ತರಕ್ಕೆ ಪುಟ ೧೧ ನೋಡಿ

ಗೆ ...

ನಗುವ ತಿಂಗಳಾಡುವಾಗ
ಕರಿಮುಗಿಲಿನ ಪತ್ತಲ
ತಿಳಿ ಬೆಳಕಲಿ ಆಡುವಾಗ
ಸುರಿದಿತೇಕೆ ಕತ್ತಲ

ಸೊಗವು ಬಾಳಲಾಡುವಾಗ
ದುಮ್ಮಾನದ ಭೇಟಿ
ನಂಬಿ ಬದುಕ ನಡೆಸುವಾಗ
ಬೆನ್ನಿಗಿರಿದೆ ಈಟಿ

ಬಳಿಗೆ ಬರುವೆನೆನ್ನುವಾಗ
ಸರಿದೆ ಏಕೆ ದೂರ
ಸುಖವ ಕೋರಿ ಬೆರೆಯುವಾಗ
ಎದೆಯು ಏಕೆ ಭಾರ

ಅರಿತೆನೆಂದು ಮೆರೆಯುವಾಗ
ನಮ್ಮ ನಡುವೆ ಬಿರುಕು
ಮೊಗೆದು ಏಕೆ ಕೊಟ್ಟೆ ನೀನು
ಬೇಡವಾದ ಸರಕು

ನಮ್ಮ ನಡುವೆ ಸರಿಯಿತೇಕೆ
ಶಂಕೆ ಎಂಬ ಹಾವು
ಉರಿದು ಬೂದಿಯಾಯ್ತು ಸೂರು
ಒಳಗೆ ಇಳಿದು ಕಾವು

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ಒಂದು ಕಾಲದಲ್ಲಿ ಕರ್ನಾಟಕದ ಒಂದು ಊರು ಮುದ್ರಣಾಲಯಗಳಿಗೆ ಹಾಗೂ ಪ್ರಕಾಶನಗಳಿಗೆ ಪ್ರಸಿದ್ಧಿಯಾಗಿತ್ತು. ಇಲ್ಲಿಂದ ಹೊರಬರುತ್ತಿದ್ದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನದಾಗಿತ್ತು. ಇದು ಯಾವ ಊರು? ಮತ್ತು ಇಲ್ಲಿಂದ ಹೊರ ಬರುತ್ತಿದ್ದ ಪುಸ್ತಕಗಳು ಯಾವ ರೀತಿಯದು?

೨. ಇದೇ ಊರಿನ ಪ್ರಸಿದ್ಧ ದೇವರು ಮತ್ತು ಪ್ರಸಿದ್ಧ ಕವಿಯನ್ನು ಹೆಸರಿಸಿ.

ಸರಿ ಉತ್ತರಕ್ಕೆ ಪುಟ ೧೭ ನೋಡಿ

ಒಗಟು – ಉತ್ತರ

೧. ನಕ್ಷತ್ರ ೨. ಗುಲಗಂಜಿ

ಹಾಸ್ಯ ಚಿಲುಮೆ

ಹೆಂಡತಿ: ರೀ ಏಳ್ರೀ ಬೇಗಾ

ಗಂಡ:ಏನಾಯ್ತೇ ರಾತ್ರಿ ಎರಡು ಗಂಟೆಗೆ ಎಬ್ಬಿಸ್ತಾ ಇದ್ದೀಯಾ?

ಹೆಂಡತಿ: ನೀವು ನಿದ್ದೆ ಮಾತ್ರೆ ತೊಗೋಳ್ಳೋದು ಮರೆತಿದ್ದೀರಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಪ್ರಶ್ನೆ ಕೇಳಿದರೆ, ಆ ದಿಕ್ಕು ತನಗೆ ಗೊತ್ತಿಲ್ಲವೆಂದ ಭೂಪ!

೨. ಮನೆಗೆ ಸಾಮಾನು ತರಲು ಸಳನ ಈ ಊರಿಗೆ ಹೋಗಲೇ ಬೇಕು

೩. ಶೇಷನಾದರೂ ಸರಿ ನಾಗನಾದರೂ ಸರಿ, ಮಹಾವಿಷ್ಣುವಿನ ಪಾಲಿಗದು

೪. ಚೆಲುಮೆಯಂತೆಯೇ ನೀರು ಚಿಮ್ಮಲು ಮಾನವ ನಿರ್ಮಿಸಿದ್ದು

೫. ಶಿವರಾತ್ರಿ ಬರುತ್ತಿದೆ, ಬೇಗ ಹೋಗಿ ತನ್ನಿ ಪೂಜೆಗೆ ಈ ಎಲೆಯನ್ನು

೬. ತನ್ಮಯರಾದ ಸಂಗೀತಗಾರರು " ನಾ ನಾ ನ", ಎಂದು ಆಲಾಪಿಸುವ ಮುನ್ನ ಬರುವ ಸ್ವರ

ಉತ್ತರ: ಕಲಿಯುಗದಲ್ಲಿ ಗಂಗಾವತರಣವ ಮಾಡಿಸಿದ ಕವಿ ವರವ ಪಡೆದಿದ್ದರು

ನಿಮ್ಮ ಉತ್ತರ ಇಮೇಲ್ ಮಾಡಿ, (horanadachilume@gmail.com)

ಮಾರ್ಚ್ ೧೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜನವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ನಂದಿನಿ ರಾಮಕೃಷ್ಣ
- ನಾಗಶೈಲ, ಸಿಡ್ನಿ
- ವೀಣಾ ಕೌಶಿಕ್, ಸಿಡ್ನಿ

ಜನವರಿ ತಿಂಗಳ ಪದಪುಂಜದ ಉತ್ತರ

೧. ಬಂಡೆಗವಿಗಳ ದೇವಾಲಯ ತಿನ್ನಲು ಬಲುರುಚಿ

ಬಾ	ದಾ	ಮಿ

೨. ಬರಬೇಡವೆಂದರೂ ಬರುವ ಇರುಳ ಹಕ್ಕಿ

ಬಾ	ವು	ಲಿ

೩.ಇನ್ನೂ ಗರಿಮೂಡದೆ, ಹಾರಲಾಗದ ಹಕ್ಕಿ

ಮ	ರಿ

೪. ಶಾಸ್ತ್ರ ಹೇಳುವವನ ಕೈಯಲ್ಲಿರುವುದು

ಬು	ಡ	ಬು	ಡಿ	ಕೆ

೫. ಹಾಗಿದ್ದಾಗಲೇ ಬಗ್ಗಿಸಬೇಕಿತ್ತು

ಗಿ	ಡ

೬. ನಾರಾಯಣನ ಅವತಾರವೇನಲ್ಲ.
ಕನ್ನಡದ ಮತ್ತೊಬ್ಬ ಮೇರುನಟ

ವಿ	ಷ್ಣು	ವ	ರ್ಧ	ನ್

ಉತ್ತರ: ಬನ್ನಿರೆಂದು ಕರೆಯುವ ಕರ್ನಾಟಕದ ಪ್ರಸಿದ್ಧ ಗಿರಿಧಾಮ

ಬಾ	ಬಾ	ಬು	ಡ	ನ್	ಗಿ	ರಿ

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ಜೀವಂತಿಕೆಯ ನಗರ – ಬ್ಯಾಂಗ್ಕಾಕ್

ಲೇಖಕರು:
ನಾಗಶೈಲ ಕುಮಾರ್

ತೇಲುವ ಮಾರುಕಟ್ಟೆಗಳು.

ಅಬ್ಬಾ! ಅದೆಷ್ಟು ಬಗೆಯ ತಿಂಡಿಗಳು, ಹುರಿದದ್ದು, ಕರೆದದ್ದು, ಬೇಯಿಸಿದ್ದು, ಹಸೀದು, ಉಪ್ಪುಕಾರ ಹಚ್ಚಿದ್ದು..... ಅಲ್ಲಿನ ಪರಿಮಳವೋ, ಎಲ್ಲಿಂದ ಬರುತ್ತಿದೆ? ಯಾವ ಮಸಾಲೆಯದು? ಯಾವ ಹಣ್ಣಿನದು? ಯಾವ ತರಕಾರಿಯದು? ಯಾವ ಮೀನಿನದು? ಒಂದೂ ತಿಳಿಯುತ್ತಿರಲಿಲ್ಲ. ಎತ್ತ ತಿರುಗಿದರೂ ಇತ್ತ ಬಾ ಎನ್ನುತ್ತ ಬಾಯಲ್ಲಿ ನೀರೂರಿಸುವ ವ್ಯಂಜನಗಳು. ನನ್ನ ಜೀವನದಲ್ಲಿ ಮೊದಲ ಬಾರಿಗೆ "ನಾನೇಕೆ ಇಲ್ಲೆಲ್ಲಾ ತಿನ್ನುವುದಿಲ್ಲ, ತಿನ್ನುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು", ಎಂದು ಬೇಸರ ಪಟ್ಟುಕೊಂಡೆ.

ತೇಲಾಡುವ ಮಾರುಕಟ್ಟೆಗಳ ಬಗ್ಗೆ ಕೇಳಿದ್ದರೂ ನನ್ನ ಕಳೆದ ಬ್ಯಾಂಗ್ಕಾಕ್ ಪ್ರವಾಸದಲ್ಲಿ ಅಲ್ಲಿಗೆ ಹೋಗಿರಲಿಲ್ಲ. ಬೆಳಗ್ಗೆ ಐದು ಗಂಟೆಗೇ ಎದ್ದು ಹೊರಡಬೇಕು, ಸುಮಾರು 100 ಕಿಮೀ ನಷ್ಟು ದೂರ ಟ್ಯಾಕ್ಸಿಯಲ್ಲಿ ಹೋಗಬೇಕು, ವಿಪರೀತ ಜನಜಂಗುಳಿ ಎಂದೆಲ್ಲಾ ಕೇಳಿ ಅಲ್ಲಿಗೆ ಹೋಗಲು ಹಿಂಜರಿದಿದ್ದೆ. ಆದರೆ ಈ ಸಲ ಬ್ಯಾಂಗಾಕ್ ನಗರದ ಬಳಿಯಲ್ಲಿಯೇ ಒಂದು ಚಿಕ್ಕದಾದರೂ ಚೊಕ್ಕದಾದ, ಅಷ್ಟಾಗಿ ಪ್ರವಾಸೀ ಆಕರ್ಷಣೆಯೇ ಪ್ರಮುಖ ಗುರಿಯಾಗದ ತೇಲುವ ಮಾರುಕಟ್ಟೆಯೊಂದಿದೆ ಎಂದು ತಿಳಿದುಕೊಂಡೆ. ಸರಿ, ಅದಕ್ಕಾಗಿ ಒಂದು ದಿನ ಮೀಸಲಿಟ್ಟು ಹೊರಟೆ.

ಬ್ಯಾಂಗ್ಕಾಕ್ನಲ್ಲಿ ಎಮ್ ಆರ್ ಟಿ (ಸುರಂಗ ರೈಲು) ಮತ್ತು ಬಿ ಟಿ ಎಸ್ (ಮೆಟ್ರೋ) ಟ್ರೈನುಗಳ ಸೌಕರ್ಯ ತುಂಬಾ ಚೆನ್ನಾಗಿದೆ. ಟ್ಯಾಕ್ಸಿ, ಟುಕ್ ಟುಕ್, ಗಳು ಧಾರಾಳವಾಗಿದ್ದರೂ, ಆ ನಗರದ ವಾಹನದಟ್ಟಣೆಗೆ ಅವುಗಳಲ್ಲಿ ಪ್ರಯಾಣ ಮಾಡುವುದೂ, ನಡೆದು ಹೋಗುವುದೂ, ಎರಡೂ ಒಂದೇ! ಇರುವುದರಲ್ಲಿ ಮೋಟಾರ್ ಸೈಕಲ್ ಟ್ಯಾಕ್ಸಿಗಳು ವಾಸಿ, ನುಗ್ಗಿಸಿ ಕೊಂಡು ಹೋಗಿ ಗುರಿ ಮುಟ್ಟಿಸುತ್ತಾರೆ.

ನನಗೆ ಸ್ಕೈ ಟ್ರೈನ್ ಗಳ ಅನುಭವ ಚೆನ್ನಾಗಿ ಆಗಿತ್ತಾದ್ದರಿಂದ ಒಂದು ದಿನದ ಪಾಸ್ ತೆಗೆದುಕೊಂಡು ಅದರಲ್ಲೇ ಸುತ್ತುತ್ತಿದ್ದೆ. ಹಿಂದಿನ ದಿನ ಟ್ರಿಪ್ ಅಡ್ವೈಸರ್ ನಲ್ಲಿ ಜಾಲಾಡಿ, ಕ್ಲಾಂಗ್ ಲಾಟ್ ಮಯೋ ಎಂಬ ತೇಲುವ ಮಾರುಕಟ್ಟೆಯ ಬಗ್ಗೆ ಸಂಪೂರ್ಣ ವಿವರ ತಿಳಿದುಕೊಂಡೆ.

ಭಾನುವಾರ ಬೆಳಗ್ಗೆಯೇ ಟ್ರೈನ್ ಹತ್ತಿ ಬಾಂಗ್ ವಾ ಎಂಬಲ್ಲಿ ಇಳಿದೆ. ಅಲ್ಲಿಂದ ಟ್ಯಾಕ್ಸಿಯಲ್ಲಿ ಸುಮಾರು 8-10 ಕಿ ಮೀ ದೂರ ಮಾರುಕಟ್ಟೆಗೆ. ನಾನು ಕ್ಲಾಂಗ್ ವಾಟ್ ಮಾಯೋ ಅಂದ್ರೆ ಟ್ಯಾಕ್ಸಿ ಡ್ರೈವರ್ಗೆ ಆರ್ಥಾನೇ ಆಗ್ತಿಲ್ಲ. ಒಂದು ಕಾಗದದ ಮೇಲೆ ಬರೆದು ತೋರಿಸಿದಾಗ ಅವಳದೇ ಬಾಷೆಯಲ್ಲಿ ಮತ್ತೊಮ್ಮೆ ಗುನುಗಿಕೊಂಡು ಬಾ ಎಂದು ತಲೆಯಾಡಿಸಿದಳು, ಪುಣ್ಯಕ್ಕೆ ಅವಳಿಗೆ ಇಂಗ್ಲೀಷ್ ಓದಲು ಬರುತ್ತಿತ್ತು.

ದಾರಿಯುದ್ದಕ್ಕೂ ಬರೀ ಕಟ್ಟಡಗಳು, ಮೇಲ್ಸೇತುವೆಗಳೇ, ಎಲ್ಲೂ ನದಿಯಾಗಲೀ, ಬೇಸಾಯದ ಭೂಮಿಯ ಕುರುಹಾಗಲೀ ಇಲ್ಲವೇ ಇಲ್ಲ. " ಇದೇನಪ್ಪಾ ಇದು ತೇಲಾಡುವ ಮಾರ್ಕೇಟ್ಟು ಅಂತಾರೆ ನೀರಿದ್ರೆ ತಾನೆ ತೇಲೋದು, ಎಲ್ಲೂ ನೀರೇ ಕಾಣಿಸ್ತಿಲ್ಲ, ಅಥ್ವಾ ಗಾಳಿಲಿ ತೇಲೋ ಮಾರ್ಕೆಟ್ಟಾ!" ಅಂತೆಲ್ಲಾ ಅಂದ್ಕೋಳ್ತಾ ಇರೋ ಹೊತ್ಗೆ, ಟ್ಯಾಕ್ಸಿ ಮುಖ್ಯ ರಸ್ತೆ ಬಿಟ್ಟು ಒಳಕ್ಕೆ ಹೊರಳಿತು. ಸ್ವಲ್ಪ ಮುಂದೆ ಹೋದ ಮೇಲೆ ನಗರಕ್ಕೆ ತಾಗಿದ್ದ ಹಳ್ಳಿಯ ಕುರುಹುಗಳು ಕಂಡಿತು. ಇದೇ ಕ್ಲೋಂಗ್ದಾನ್ ಮಯೋ ಅನ್ನುತ್ತಾ ಟ್ಯಾಕ್ಸಿಯವಳು ನನ್ನನ್ನು ಇಳಿಸಿದಳು. ಮೀಟರ್ ಹಾಕಿಕೊಂಡು ಬಂದು ಎಷ್ಟಾಗಿತ್ತೋ ಅಷ್ಟು ಮಾತ್ರ ದುಡ್ಡು ತೆಗೆದುಕೊಂಡ ಆ ಡ್ರೈವರ್ ಗೆ ನಾನೇ 10 ಬಾತ್ ಜಾಸ್ತಿ ಕೊಟ್ಟೆ.

ಮುಂದಿನ ಪುಟ ನೋಡಿ ...

ಇನ್ನೂ ಒಂಬತ್ತು ಗಂಟೆಯಷ್ಟೇ ಆಗ. ನಾನು ದೊಡ್ಡದಲ್ಲದಿದ್ದರೂ ಸುಮಾರಾದ ನದಿಯೊಂದಿರಬಹುದೆಂದು ಹುಡುಕಿದೆ. ಆದರೆ ದೊಡ್ಡದಾಗಿ ಕಾಣಿಸಿದ್ದು ರಸ್ತೆಯ ಎರಡೂ ಬದಿಗೆ ವಿಶಾಲವಾಗಿ ಹರಡಿದ್ದ ಚಪ್ಪರಗಳು. ಕೆಳಗೆ ಸಾಲುಸಾಲಾಗಿ ಜೋಡಿಸಿದ್ದ ಮೇಜು, ಕುರ್ಚಿಗಳು. ಒಟ್ಟಿಗೇ ಸಾವಿರಾರು ಜನ ಕೂಡುವಷ್ಟಿ ಶಾಲವಾಗಿತ್ತು ಆ ಚಪ್ಪರಗಳು. ನಾನಿದ್ದ ರಸ್ತೆಯಲ್ಲಿ ಮುಂದೆ ಒಂದು ಸಣ್ಣ ಸೇತುವೆ ಕಾಣಿಸಿತು. ಅಲ್ಲೇ ನದಿಯಿರಬಹುದೆಂದು ಆ ಸೆತುವೆಯ ಮೇಲೆ ಹೋದೆ. ಕಾಣಿಸಿದ್ದು ನದಿಯಿರಲಿ, ಕೇವಲ ಇಪ್ಪತ್ತು ಅಡಿಯಷ್ಟು ಅಗಲವೂ ಇರಲಾರದ ಒಂದು ಕಾಲುವೆ. ಅದರಲ್ಲೇ ಹಲವು ನೀಳ ದೋಣಿಗಳು ತೇಲುತ್ತಿದ್ದವು.ಕೆಲವುಗಳಲ್ಲಿ ಪ್ರವಾಸಿಗರು ಹುಟ್ಟು ಹಾಕಿಕೊಂಡು ಹೋಗುತ್ತಿದ್ದರೆ, ಇನ್ನು ಕೆಲವುದರಲ್ಲಿ, ಸ್ಥಳೀಯ ರೈತರು, ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಹೊತ್ತು ತಂದಿದ್ದರು. ತಾಜಾ ಹಣ್ಣು ಹಂಪಲು, ತರಕಾರಿಗಳು ಮಾರುಕಟ್ಟೆಗೆ ಬಂದು ಸೇರುತ್ತಿದ್ದವು.

ಕಾಲುವೆಯ ಎರಡೂ ಬದಿಗೆ ಹಬ್ಬಿದ್ದ ಚಪ್ಪರದಲ್ಲಿದ್ದ ಅಂಗಡಿಗಳು ನನ್ನ ಕುತೂಹಲ ಕೆರಳಿಸಿತ್ತು. ಒಳಗೆ ಹೋದರೆ ಅದು ತರಕಾರಿ ಸಂತೆಯಂತಿರದೆ, ತಿಂಡಿಗಳ ಮೇಳದಂತಿತ್ತು. ಇನ್ನೂ ಅಷ್ಟಾಗಿ ಜನಜಂಗುಳಿಯಿರಲಿಲ್ಲ. ಒಂದೊಂದೇ ಸಾಲು ನೋಡುತ್ತಾ ಹೋದೆ. ತಾಜಾ ತರಕಾರಿಗಳು, ಸೊಪ್ಪುಗಳು, ಹಣ್ಣುಗಳು, ಬೇಳೆಕಾಳು, ಮೀನು ಇತ್ಯಾದಿ ಇತ್ಯಾದಿ ನೂರಾರು ರೀತಿಯ ಖಾದ್ಯ ವಸ್ತುಗಳನ್ನು ಬಳಸಿ ತಿಂಡಿ ತಿನಿಸುಗಳನ್ನು ತಯಾರಿಸುತ್ತಿದ್ದರು. ಮಸಾಲೆಗಳನ್ನು ಅಲ್ಲೇ ಅರೆದು, ಕುಟ್ಟಿ ,ಆಹಾರಗಳಲ್ಲಿ ಬೆರೆಸುತ್ತಿದ್ದರು.ಒಂದೊಂದು ಪದಾರ್ಥವನ್ನು ನೋಡಿದಾಗಲೂ, ಇದು ನಮ್ಮ ಇಡ್ಲಿಯ ಹಾಗೆ ಇದೆ, ದೋಸೆಯ ಹಾಗೆ, ಕಡುಬಿನ ಹಾಗೆ ಎಂದೆನಿಸುತ್ತಿತ್ತು. ತಯಾರಿಸುವ ಶುದ್ಧ ಸಾಂಪ್ರದಾಯಿಕ ವಿಧಾನ ನೋಡಿ ಆಶ್ಚರ್ಯವಾಯಿತು.

ಎಲ್ಲಿ ನೋಡಿದರೂ ಬಾಳೆ, ಸೀಬೆ, ಮಾವು, ಅನಾನಸ್, ಪನ್ನೇರಳೆ, ಹಲಸು, ಪಪ್ಪಾಯಿ ಹಣ್ಣುಗಳ ಗುಡ್ಡೆಗಳು. ಅವಗಳನ್ನು ಅಂದವಾಗಿ ಹೆಚ್ಚಿ ಪ್ಲಾಸ್ಟಿಕ ಡಬ್ಬ ಅಥವಾ ಕವರ್ ಗಳಲ್ಲಿ ಹಾಕಿ ಮಾರುತ್ತಿದ್ದರು. ಮಾವು, ಸೀಬೆಗಳ ಜೊತೆಗೆ ಉಪ್ಪು ಮೆಣಸಿನ ಪುಡಿ ಮತ್ತೊಂದು ಪುಟ್ಟ ಕವರ್ ನಲ್ಲಿ. ಬೇಯಿಸಿದ ಕಡಲೇಕಾಯಿ, ಜೋಳ ಕೂಡ ಇತ್ತು. ಹಲಸಿನ ತೊಳೆಯ ಒಳಗೆ ಅನ್ನವನ್ನಿಟ್ಟು ತಯಾರಿಸುವ ಖಾದ್ಯ, ಹಲಸಿನ ತೊಳೆ, ಅನಾನಸ್, ಮತ್ತು ಬಾಳೆ ಹಣ್ಣುಗಳನ್ನು ಎಣ್ಣೆಯಲ್ಲಿ ಕರಿದು ಅವುಗಳನ್ನು ಸಕ್ಕರೆ ಪಾಕದಲ್ಲಿ ನೆನೆಸಿಟ್ಟು ತಯಾರಿಸಿದ ಸಿಹಿ ತಿಂಡಿಗಳು ಅಚ್ಚರಿ ಮೂಡಿಸಿದವು.

ಇಷ್ಟೆಲ್ಲಾ ವಿಧದ ಸಾಂಪ್ರದಾಯಕ ಆಹಾರ ಪದಾರ್ಥಗಳ ತಯಾರಿಕೆಯ ಶ್ರಮವನ್ನು ಸಾರ್ಥಕ ಪಡಿಸುವಂತೆ ಹತ್ತಿರದ ಬ್ಯಾಂಗಕಾಕ್ ನಿಂದ ಸಾವಿರಾರು ಕುಟುಂಬಗಳು ಸಂತೆಯಂತೆ ಇಲ್ಲಿ ನೆರೆದು, ತೃಪ್ತಿಯಾಗುವಂತೆ ತಿಂದು ವಾರಾಂತ್ಯವನ್ನು ಕಳೆಯುತ್ತಿದ್ದರು.

ಸುತ್ತಲೂ ಸಮುದ್ರವಿದ್ದರೂ, ಒಂದು ಹನಿಕುಡಿಯುವ ನೀರಿಗಾಗಿ ತವಕಿಸುವಂತಾಗಿತ್ತು ನನ್ನ ಸ್ಥಿತಿ. ಏನು ತಿನ್ನಲು ಹೋದರೂ ಯಾವುದೋ ಒಂದು ರೀತಿಯಲ್ಲಿ ಅದರಲ್ಲಿ ಮಾಂಸಾಹಾರದ ಅಂಶ ಬೆರೆತಿರುತ್ತಿತ್ತು. ಆದರೆ ಮನಸೋ ಇಚ್ಛೆ ಹಣ್ಣುಗಳನ್ನು ಕೊಂಡು ತಿಂದೆ. ಸಿಹಿ ಜೋಳದ ಹಾಲನ್ನು ಪ್ರಥಮ ಬಾರಿಗೆ ಕುಡಿದೆ. ಬೇಯಿಸಿದ ಕಡಲೇಕಾಯಿ ಕೂಡ ಬಹಳ ದಿನಗಳ ಮೇಲೆ ನನ್ನ ಬಯಕೆಯನ್ನು ತಣಿಸಿತು. ಇಲ್ಲಿ ಮತ್ತೊಂದು ಆಶ್ಚರ್ಯಕರ ಸಂಗತಿಯೆಂದರೆ, ಪಿಟ್ಜಾ, ಪಾಸ್ತಾ, ಕೋಕ್, ಫಾಂಟಾ, ಮುಂತಾದವುಗಳ ಸುಳಿವೂ ಇರಲಿಲ್ಲ. ಕೇವಲ ಸಾಂಪ್ರದಾಯಿಕ ತಿನಿಸುಗಳಷ್ಟೆ.

ಮುಂದಿನ ಪುಟ ನೋಡಿ ...

ದೋಣಿಯಲ್ಲಿ ಪಯಣ:-

100 ಬಾತ್ ಕೊಟ್ಟರೆ ಒಂದೂವರೆ ಗಂಟೆಗಳ ದೋಣಿಯಾನ, ಜೊತೆಗೆ ಮತ್ತೊಂದು ಮಾರುಕಟ್ಟೆ ಹಾಗೂ ದೇವಾಲಯದ ಭೇಟಿ ಎಂದು ಬೋರ್ಡ್ ಕಾಣಿಸಿತು.

ನೂರು ಬಾತ್ ಕೊಟ್ಟು ಉದ್ದನೆಯ ಸುಮಾರು ಹದಿನೈದು ಜನರು ಹಿಡಿಸುವ ಮರದ ದೋಣಿಯನ್ನು ಹತ್ತೇ ಬಿಟ್ಟೆ. ಅದು ಮುಂದೆ ಹೊರಟಾಗ ಯಾಕಾದರೂ ಹತ್ತಿದೆನೋ ಎನಿಸಿತು. ಕೇವಲ ಹದಿನೈದಿಪ್ಪತ್ತು ಅಡಿ ಅಗಲದ ಕಾಲುವೆಯಲ್ಲಿ ಕಾರಿನಂತೆ ವೇಗವಾಗಿ ಚಲಿಸುತ್ತಿತ್ತು. ಲೈಫ್ ಜಾಕೆಟ್ ಇತ್ಯಾದಿ ಯಾವುದೇ ರೀತಿಯ ಜೀವ ರಕ್ಷಕ ಸಾಮಗ್ರಿಗಳೊಂದೂ ಇರಲಿಲ್ಲ. ಕಾಲುವೆಯ ಆಳವೆಷ್ಟಿದೆಯೋ ಅದೂ ತಿಳಿಯದು.ಎದುರಿನಿಂದ ವೇಗವಾಗಿ ಬರುವ ಇತರ ದೋಣಿಗಳು, ಅಲ್ಲಲ್ಲಿ ದೋಣಿಗೆ ತಾಕುವಂತ ಹಾದು ಹೋಗಿರುವ, ಬಲೆ ಹೆಣೆದಂತ ವಿದ್ಯುತ್ ತಂತಿಗಳು, ಭಯ ಹುಟ್ಟಿಸಿದವು. ಆದರೆ ಕೆಲನಿಮಿಷಗಳ ನಂತರ ಅವುಗಳೆಲ್ಲವನ್ನೂ ಮರೆತು ಸುತ್ತಲಿನ ಅಪರೂಪದ ಪರಿಸರವನ್ನು ಅನುಭವಿಸತೊಡಗಿದೆ.

ಬ್ಯಾಂಗ್ಕಾಕ್ ಪೂರ್ವದ ವೆನಿಸ್, ಕಾಲುವೆಗಳ ನಗರ ಎಂದೇ ಹೆಸರು ಪಡೆದಿತ್ತು. ನದಿ ಕಾಲುವೆಗಳು ಜನಸಂಚಾರ, ವ್ಯಾಪಾರ, ಸರಕು ಸಾಗಣೆಗಳ ಪ್ರಮುಖ ಮಾರ್ಗವಾಗಿತ್ತು. ನಗರವು ಬೆಳೆದಂತೆಲ್ಲಾ ನದಿ ಕಾಲುವೆಗಳ ಒತ್ತುವರಿಯಾಗಿ ಈಗ ಕಾಲುವೆಗಳ ಸಂಖ್ಯೆಯೂ ಕ್ಷೀಣಿಸಿದೆ. ಮುಂಚೆ ಜನಜೀವನದ ಅಂಗವಾಗಿದ್ದ ನೀರಿನ ಮೇಲಿನ ವ್ಯಾಪಾರವು ಈಗ ಬಹಳಷ್ಟು ಕಡೆಗಳಲ್ಲಿ ಪ್ರವಾಸಿಗರನ್ನು ಸೆಳೆಯುವ ವಾಣಿಜ್ಯ ಕೇಂದ್ರಗಳಂತಾಗಿವೆ. ಆದರೂ ಅದರ ವಿಭಿನ್ನತೆ, ಸಾಂಪ್ರದಾಯಿಕ ಸೊಗಡು ಇನ್ನೂ ಮಾಸಿಲ್ಲ.
ನಾನು ಹೋಗಿದ್ದ ಮಾರುಕಟ್ಟೆ ಮತ್ತು ದೋಣಿಯಾನ ಅಷ್ಟಾಗಿ ವಾಣಿಜ್ಯಗೊಂಡಿಲ್ಲ ಎಂಬ ಮಾತಿದೆ.



ದೋಣಿ ಮುಂದೆ ಸಾಗುತ್ತಿದ್ದರೆ ನಾವೊಂದು ಮಹಾನಗರದ ನಡುವಲ್ಲಿದ್ದೇವೆ ಎಂಬ ನೆನಪೇ ಆಗುವುದಿಲ್ಲ. ರಸ್ತೆಯಂತೆಯೇ ಇರುವ ಕಾಲುವೆಯು, ಎಡ ಬಲ ತಿರುವುಗಳು, ಕೂಡು ಹಾದಿ, ಎಲ್ಲವನ್ನೂ ಹೊಂದಿದೆ. ಇಲ್ಲೂ ಮನೆ ಮನೆಯ ಮುಂದೆ ಡ್ರೈವ್ ವೇ ಗಳ ಹಾಗೆ ದೋಣಿ ನಿಲ್ಲಿಸಿಕೊಳ್ಳಲು ಜಾಗಗಳಿವೆ. ದೋಣಿಯಲ್ಲೇ ಬಂದು ವ್ಯಾಪಾರ ಮಾಡಿಕೊಂಡು ಹೋಗಲು ಅಂಗಡಿಗಳಿವೆ, ದೇವಸ್ಥಾನಗಳೂ ಉಂಟು.

ತೋಟ, ಗದ್ದೆಗಳ ಮಧ್ಯೆ ಸಾಗುತ್ತಿದ್ದ ದೋಣಿ ಕೆಲ ಕಾಲ ನಗರದ ಪರಿಸರವನ್ನೇ ಮರೆಯಿಸಿಬಿಟ್ಟಿತು. ಈ ಪ್ರಯಾಣದಲ್ಲಿ ಮೊದಲು ಸಿಕ್ಕಿದ ಜಾಗ ಮತ್ತೊಂದು ಪುಟ್ಟ ತೇಲುವ ಮಾರುಕಟ್ಟೆ.
ಇದೂ ಕೂಡ ಮೊದಲ ಮಾರುಕಟ್ಟೆಯಂತೆಯೇ ಇತ್ತು ಆದರೆ ವಿಸ್ತೀರ್ಣ ಅದರಲ್ಲಿ ಶೇಕಡ ಹತ್ತರಷ್ಟು ಕೂಡ ಇರಲಿಲ್ಲ. ಇಲ್ಲಿನ ವಿಶೇಷತೆಯೆಂದರೆ, ಜೊತೆಯಲ್ಲಿಯೇ ಇದ್ದ ದೇವಸ್ಥಾನ. ತೆರೆದ ಮಂಟಪಗಳಂತಿರುವ ಜಾಗದಲ್ಲಿ ಎರಡು ದೊಡ್ಡದಾದ ಬುದ್ಧನ ವಿಗ್ರಹಗಳಿದ್ದವು. ಇಬ್ಬರು ಬಹುಶಃ ಪೂಜಾರಿಗಳು ಹೂವು ಹಣ್ಣು ತಂದವರಿಗೆ, ಕುಳಿತೆಡೆಯಲ್ಲಿಯೇ, ರಾಗವಾಗಿ ಮಂತ್ರಗಳನ್ನು ಹೇಳುತ್ತಾ ಪೂಜೆ ಮಾಡಿಸುತ್ತಿದ್ದರು. ಆ ಮಂತ್ರಗಳು ಹೂವು ಊದಿನ ಕಡ್ಡಿಗಳ ಪರಿಮಳ, ನೆಲಕ್ಕೆ ಬಾಗಿ ನಮಿಸುತ್ತಿದ್ದ ಭಕರು, ಇವೆಲ್ಲವನ್ನೂ ನೋಡಿದರೆ, ನಮ್ಮ ಸಂಸ್ಕೃತಿಗೂ , ಇವರ ಸಂಸ್ಕೃತಿಗೂ ಯಾವುದೋ ಕೊಂಡಿ ಇದೆ ಅದನ್ನು ಪತ್ತೆ ಹಚ್ಚಬೇಕು ಎನ್ನಿಸಿತ್ತು.

ಮುಂದೆ ದೋಣಿಯ ನಿಲುಗಡೆ ಒಂದು ಆರ್ಕಿಡ್ ತೋಟದಲ್ಲಿ. ಕೇವಲ ನೀರಿನಿಂದ ಬೆಳೆಯುತ್ತಿದ್ದ ಆರ್ಕಿಡ್ ಹೂಗಿಡಗಳಂತೆಯೇ ಆಕರ್ಷಿಸಿದ್ದು ಅಪರೂಪಕ್ಕೆ ಕಾಣಿಸಿದ ಪನ್ನೇರಳೆ ಹಣ್ಣುಗಳು. ಕೊಂಡು ತಿಂದಾದ ಮೇಲೆ ಆರ್ಕಿಡ್ ತೋಟಕ್ಕೆ ಬಂದದ್ದು ಸಾರ್ಥಕವೆನಿಸಿತು! ಮತ್ತೆ ದೋಣಿ ಹತ್ತಿ ಯಾನ ಆರಂಭಿಸಿದ ಕ್ಲೋಂಗ್ಟಾಟ್ ಮಯೋ ಮಾರುಕಟ್ಟೆಗೆ ಹಿಂದಿರುಗಿದಾಗ, ಇಷ್ಟು ಬೇಗ ಒಂದೂವರೆ ಗಂಟೆ ಕಳೆದುಹೋಯಿತೇ ಎನ್ನಿಸಿತ್ತು.

ಮರಳಿ ಬ್ಯಾಂಗ್ಕಾಕ್ ಕಡೆಗೆ ಹಿಂದಿರುಗುವಾಗ, ಆ ಮಾರುಕಟ್ಟೆಯಲ್ಲಿ ಯಾವುದೇ ತಿಂಡಿತಿನಿಸನ್ನು ತಿನ್ನದೇ ಹೋದರೂ, ಕಣ್ಣು, ಮನಸ್ಸುಗಳನ್ನು ತುಂಬಿದ ಅಲ್ಲಿನ ನೋಟ, ಅನುಭವಗಳು ಹೊಟೆಯನ್ನೂ ತುಂಬಿಸಿದ್ದವು. ▪

ಹೀಗೊಂದು ಪ್ರೇಮ ಕಥನ !

ಲೇಖಕರು: ಸ್ಮಿತಾ ಮೇಲ್ಕೋಟೆ

ಫೆಬ್ರವರಿ ಬಂತೆಂದರೆ ಪ್ರೇಮ ಕಥೆಗಳಿಗೊಂದು ಹೊಸ ಆಯಾಮ. ಹುಡುಗ ಹುಡುಗಿ ಗಿಫ್ಟ್ ಬದಲಾವಣೆ ಮಾಡಿಕೊಳ್ಳುವುದೆಂತು, ಲವ್ ಮೆಸೇಜ್ ಗಳ ಮಹಾಪೂರ ಹರಿಸುವುದೆಂತು, ಫೋನ್ ಗಳ ಮೇಲೆ ಫೋನ್ ಮಾಡುವುದೆಂತು?? ಪ್ರೇಮ ಪ್ರಣಯದ ಕವಿತೆ ಬರೆಯುವುದೆಂತು, . ಫೇಸ್ ಬುಕ್ ನಲ್ಲಂತೂ ಹಾರ್ಟ್ ಗಳ ಮೇಲೆ ಹಾರ್ಟ್ ಗಳು ಎಲ್ಲರ ವಾಲ್ ಮೇಲೆ ಹರಿದಾಡುವಂತೇನು . ಇದೆಲ್ಲಾ ಇಲ್ಲದ ನಮ್ಮ ಕಥಾ ನಾಯಕ ಮತ್ತು ನಾಯಕಿಯ ಪ್ರಣಯ ಪ್ರಸಂಗವನ್ನು ನಾನು ನಿಮ್ಮ ಮುಂದಿಡುತ್ತಿದ್ದೇನೆ.

ನಮ್ಮ ಕುಟುಂಬದ ಪರಿಚಯದವರು, ಗಂಡು ನಾಯಿ ಮರಿಯೊಂದು ಮನೆಗೆ ಕರೆ ತಂದರು. ಸುಬ್ಬ ಅಂತ ನಾಮಕರಣವೂ ನಡೆಯಿತು. ಸುಬ್ಬನಿಗಂತೂ ರಾಜೋಪಚಾರ, ವಿಶೇಷ ಆಹಾರ, ಪಾನೀಯ, ಹಾಲು ಸೋಪು, ಹಾಸಿಗೆ, ರೂಮು. ಮನೆ ಮಗನ ಹಾಗೆ ಪ್ರೀತಿಯಿಂದ ಬೆಳೆಯಿತು. ಮೂರು ನಾಲ್ಕು ವರ್ಷದ ನಾಯಿಯ ವಯಸ್ಸು, ಮನುಷ್ಯನ ಆಯಸ್ಸು ಪ್ರಕಾರ ೨೮-೩೦ ವರ್ಷದ ಪ್ರಾಯ. ಮನೆಯವರೇನು ಹೆಣ್ಣು ನೋಡಿ, ಮದುವೆ ಮಾಡುವ ಉದ್ದೇಶ ಇಟ್ಟು ಕೊಂಡಿರಲಿಲ್ಲ. ಸುಬ್ಬನಿಗೆ ಕೇಳಲೂ ಆಗದು, ಹರಯದ ಪ್ರೇಮ ಬಿಡಲೂ ಆಗದು.

ಗಂಡು ನಾಯಿಯ ಜೀವನ, ಆಟ ಊಟ ಮತ್ತು ಮನುಷ್ಯರ ಪ್ರೀತಿ ಇದರಲ್ಲೇ ಮುಳುಗಿರಲು, ಹಠಾತ್ ಒಂದು ದಿನ ಮನೆಯವರ ಗೆಳೆಯರು, ಒಂದು ಹೆಣ್ಣು ನಾಯಿಯೊಂದಿಗೆ ಭೇಟಿ ನೀಡಿದರು. ಮನೆ ಹಿಂದೆ ಇದ್ದ, ಸುಬ್ಬ ಓಡೋಡಿ ಬಂದು ಮರೆಯಲ್ಲಿ ನಿಂತು ನೋಡಿದ, ಆಹಾ ತನ್ನ ಕನಸಿನ ಸುಂದರಿ ಎದುರಿಗೇ ಬಂದು ನಿಂತಳೇ, ಬಂದ ಹೆಣ್ಣು ಮರಿ ಸ್ವಲ್ಪ ವಯಸ್ಸಿನಲ್ಲಿ ಚಿಕ್ಕದೋ ಏನೋ, ಸುಬ್ಬನ ಕಡೆ ತಿರುಗಿದರೇ ಕೇಳಿ. ಊಹುಂ ಎಷ್ಟು ಬಾಲ ಅಲ್ಲಾಡಿಸಿದರೂ, ಎಷ್ಟು ಕಣ್ಣು ಸನ್ನೆ ಮಾಡುತ್ತಿದ್ದರೂ ಸುಬ್ಬ, ಬೋ ಬೋ ಅಂತ ಸಣ್ಣ ದನಿಯಲ್ಲಿ ಕರೆದರೂ ಕೇರೇ ಇಲ್ಲ. ಸುಬ್ಬನಿಗೆ ಸ್ವಲ್ಪ ನಿರಾಶೆಯಾದರೂ, "ಲವ್ ಅಟ್ ಫಸ್ಟ್ ಸೈಟ್ " ಆಗೇ ಬಿಟ್ಟಿತು ತನ್ನ ಅದೃಷ್ಟಕ್ಕೆ, ಕನಸಿನ ಲವರ್ ನೋಡಲು ಸಿಕ್ಕಿದಳಲ್ಲಾ, ಹೇಂಗಾರು ಅವಳ ಮನ ಒಲಿಸಬೇಕು ಅಂತ ಮನದಲ್ಲೇ ಮಂಡಿಗೆ ತಿನ್ನ ತೊಡಗಿತು.

ಹೆಣ್ಣು ನಾಯಿ ಜೊತೆ ಬಂದ ಜನ ಟಾಟಾ ಬೈ ಬೈ ಅಂತ ಹೇಳಿ ಸಾಯಂಕಾಲ ಹೋಗೆ ಬಿಡುವುದೇ, ಸುಬ್ಬ ಮಾತ್ರ ಮನೆ ಅಕ್ಕ ಪಕ್ಕ ಓಡಿ ಜಿಗಿದು, ತನ್ನ ಗೆಳತಿಯ ಕಡೆಯ ಒಂದು ನೋಟಕ್ಕೆ ಹಾತೊರಿಯುತ್ತಿರುವಾಗಲೇ, ಕಾರಿನಿಂದ ಹೆಣ್ಣು ನಾಯಿ ಮರಿ ಕಳ್ಳ ನೋಟ ಬೀರಿತು ಸುಬ್ಬನ ಕಡೆಗೆ. ಅಷ್ಟು ಸಾಕು, ನಮ್ಮ ಕಥಾ ನಾಯಕನ ಪ್ರೀತಿ ಬೆಳೆದು ಹೆಮ್ಮರವಾಗಲು. ಪ್ರೇಯಸಿ ಇಲ್ಲದೆ ಸುಬ್ಬನಿಗೆ ಊಟ ತಿಂಡಿ ನಿದ್ದೆ ಏನೂ ಬೇಡವಾಯಿತು, ಯಾಕೋ ಮಂಕು ಮಂಕು ನೋಟ, ಆಟದಲ್ಲಿ ಆಸಕ್ತಿ ಇಲ್ಲ ಎಂದು ಮನೆಯವರೂ ಕೂಡ ನಾಯಿ ಡಾಕ್ಟರ್ ಹತ್ತಿರ ಹೋದರು. ಚೆಕ್ ಮಾಡಿದ ಅವರು ಏನೂ ದೋಷವಿಲ್ಲ, ಎಲ್ಲಾ ಸರಿಯಾಗಿದೆ, ಸ್ವಲ್ಪ ಹೊರಗಡೆ ತಿರುಗಾಡಿಸಿ ಸರಿ ಹೋಗುತ್ತಾನೆ ಎಂದು ಸಮಾಧಾನ ಹೇಳಿ ಕಳಿಸಿದರು.

ಸುಬ್ಬನಿಗೆ ದೇವರಲ್ಲಿ ನಂಬಿಕೆ ಯಾವಾಗ ಬಂತೋ ಗೊತ್ತಿಲ್ಲ. ತನ್ನ ಪ್ರೇಯಸಿಯನ್ನು ಮತ್ತೆ ಕಳಿಸು ಎಂದು ಬೇಡುತ್ತಾ ದೇವರ ಮನೆ ಮುಂದೆಯೇ ಜಾಂಡಾ ಹೂಡಿಬಿಡೋದೆ, ಭಿಲ್ ಕುಲ್ ಅಲ್ಲಿಂದ ಕದಲುತ್ತಿಲ್ಲ, ಮನೆಯವರಿಗೇನು ಅರ್ಥವಾಗಬೇಕು ಈ ವಿರಹ ವೇದನೆ. ಅಜ್ಜಿ ತಾತ ನಾಯಿನ ದೇವರ ಮನೆ ಮುಂದೆ ಯಾಕ್ಕೋ ಬಿಟ್ಟು ಕೊಂಡಿದ್ದೀರಾ ಅಂತ ಗೊಣಗೋದು, ಮಕ್ಕಳು ಮನೆಯವರು ನಾಯಿ ಸಮಸ್ಯೆ ಅರ್ಥ ಮಾಡಿಕೊಳ್ಳದೆ ಇರೋದು, ಸುಬ್ಬನಿಗೆ ಬಹಳ ಬೇಸರ ತಂದಿತು. ಪ್ರೇಯಸಿ ಬಂದರೆ, ಅವಳ ಜೊತೆ ವಿಹಾರ ಹೋಗಬಹುದು, ಆತ ಆಡಬಹುದು, ಮನುಷ್ಯರ ಸಹವಾಸವೇ ಬೇಡ ಅಂತೆಲ್ಲಾ ಯೋಚನೆ ಪಾಪ ಸುಬ್ಬನಿಗೆ. ಗೆಳತಿಗೆ ಹೇಗಾರು ತನ್ನ ಪ್ರೇಮ ಸಂದೇಶ ಕಳಿಸೋಣವೆಂದರೆ ಹೇಗೆ ? ಏನೂ ತೋಚುತ್ತಿಲ್ಲ. ದೇವರೇ ದಿಕ್ಕು. ನೀನೆ ಕಾಪಾಡು ಎಂದು ದೇವರ ಮೇಲೆ ಭಾರ ಹಾಕಿ ಬಿಟ್ಟ ಸುಬ್ಬ.

ಫೆಬ್ರವರಿ ಹದಿನಾಲ್ಕು ಬಂತು, ಏನೋ ವ್ಯಾಲೆಂಟೈನ್ಸ್ ಡೇ ಅಂತೆ, ಪ್ರಿಯಕರ ಪ್ರೇಯಸಿ ಅಂತ ದಿನ ಆಚರಿಸುತ್ತಾರಂತೆ ಎಂಬ ವಿಷಯ ಹೇಗೋ ಸುಬ್ಬನಿಗೂ ಗೊತ್ತಾಯಿತು. ತನ್ನ ಪಾಲಿನ ಚಿಕ್ಕ ಮೂಳೆಯ ಚೂರೊಂದು ಅಡಗಿಸಿಟ್ಟಿದ್ದು, ಗೆಳತಿ ಬಂದರೆ ಕೊಡ ಬಹುದೇನೋ ಎಂಬ ಮನದ ಮೂಲೆಯಲ್ಲೊಂದು ಆಸೆ . ಪ್ರೇಯಸಿಯೇ ಬರದೇ ಅದಕ್ಕೆಲ್ಲಿ ಅರ್ಥ?

ವಾಕಿಂಗ್ ಹೋದಾಗಲೂ, ತನ್ನ ಗೆಳತಿ ಸಿಗಬಹುದೇನೋ, ತನ್ನ ಜೊತೆ ಅವಳೂ ಮನೆಗೆ ಬರಬಹುದೇನೋ ಎಂಬ ಕನಸು ಕಾಣುತ್ತಾ ಸುಬ್ಬ ಸಂತೋಷ ಅನುಭವಿಸುತ್ತಿದ್ದ. ಫೋನ್ ಕಾಲ್ ಇಲ್ಲ, ಮೆಸೇಜ್ ಇಲ್ಲ, ಗ್ರೀಟಿಂಗ್ ಕಾರ್ಡ್ ಇಲ್ಲ, ಫೇಸ್ ಬುಕ್ ಮೇಲೆ ಚಾಟ್ ಇಲ್ಲ, ನೋಡಿ ಆದರೂ ಅನುರಾಗ ಚಿಗುರಿತ್ತು.

ವಾಕಿಂಗ್ ಮುಗಿಸಿ ಮನೆಗೆ ಬರುತ್ತೆ ಸುಬ್ಬ, ಇನ್ನೊಂದು ಕಾರು, ಅದೇ ತನ್ನ ಗೆಳತೀ ಬಂದ ಕಾರು. ವಾಸನೆ ಹತ್ತಿ, ಜಿಗಿದಾಡಿ, ದೇವರು ಕಣ್ಣು ಬಿಟ್ಟ ನಮ್ಮ ಸುಬ್ಬನ ಮೇಲೆ!!! ಗೆಳತಿಯ ಮನೆಯವರು ಸುಬ್ಬನ ಮನೆ ಪಕ್ಕವೇ ಮನೆ ಕೊಂಡು ತಮ್ಮ ವಾಸ್ತವ್ಯ ಹೂಡಿದ್ದರು. ಸುಬ್ಬನ ಗೆಳತಿ ಸುಬ್ಬಿ ಈಗ ಸ್ವಲ್ಪ ಬಿಗುಮಾನ ಬಿಟ್ಟು ಸುಬ್ಬನ ಜೊತೆ ಸ್ನೇಹದಿಂದ ಇದ್ದಾಳೆ.

ಇಬ್ಬರಿಗೂ ಮದುವೆ ಆಯಿತಾ ಅಂತ ಕೇಳಬೇಡಿ, ಸುಬ್ಬ ಮತ್ತು ಸುಬ್ಬಿ ಜಾತಕ ಇನ್ನೂ ಕೂಡಿ ಬಂದಿಲ್ಲ !! ▪

ನೀವು ಮಾಡಿ

ನಾಡಿಮಿಡಿತ

ಸಂಗ್ರಹ: ಬದರಿ ತ್ಯಾಮಗೊಂಡ್ಲು

ಮಾನವನ ನಾಡಿಮಿಡಿತವನ್ನು ಈ ಸರಳ ಪ್ರಯೋಗದಿಂದ ದೃಶ್ಯೀಕರಿಸಬಹುದು (Visualize) !

ಬೇಕಾಗುವ ಸಾಮಾನು:

ಡ್ರಾಯಿಂಗ್ ಪಿನ್, ಬೆಂಕಿ ಕಡ್ಡಿ

ವಿಧಾನ

ಬೆಂಕಿಕಡ್ಡಿಯ ಬುಡಕ್ಕೆ ಒಂದು ಡ್ರಾಯಿಂಗ್ ಪಿನ್ ಚುಚ್ಚಿರಿ.

ಇದನ್ನು, ನಿಮ ಕೈನ ಮಣಿಕಟ್ಟಿನ (wrist) ಜಾಗದಲ್ಲಿ ಸಮತೋಲನ ಬರುವಂತೆ ನಿಲ್ಲಿಸಿ.

ಸಮತೋಲನ ಬರಲು ನಿಮ್ಮ ಕೈಯನ್ನು ಒಂದು ಬೆಂಚಿನ ಮೇಲೆ ಇಡಬಹುದು.

ನಿಧಾನವಾಗಿ ಗಮನಿಸಿದಾಗ ಬೆಂಕಿಕಡ್ಡಿ ಅತ್ತಿಂದಿತ್ತ ವಾಲುವುದನ್ನು ಕಾಣಬಹುದು.



ನಾಡಿಮಿಡಿತ ಏಕೆ ?

ಹೃದಯದ ಎದೆಬಡಿತ ದೇಹದ ಅಪಧಮನಿ ವ್ಯವಸ್ಥೆಯಲ್ಲಿ (arterial system) ನಾಡಿಮಿಡಿತವನ್ನು (pulse) ತರುತ್ತದೆ. ಇದನ್ನು sthethoscope ಮೂಲಕವೂ ಕೇಳಿಸಿಕೊಳ್ಳಬಹುದು. ಮನೆಯಲ್ಲಿ ಮೇಲೆ ತಿಳಿಸಿದ ಸುಲಭ ಮಾರ್ಗದಿಂದ ನೋಡಬಹುದು ▪

ಜಾಣ ಕರ್ನಾಟಕ – ಉತ್ತರ

೧. ಗದಗ್, ವಿದ್ಯಾರ್ಥಿ ಮಾರ್ಗದರ್ಶಿ(ಗೈಡ್ ಪುಸ್ತಕಗಳು)

೨. ವೀರನಾರಾಯಣ, ಕುಮಾರವ್ಯಾಸ

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಕರ್ನಾಟಕ ವೈಭವ

1ST OF APRIL 2017

TIME : 6.30pm gather for 7.00pm start
VENUE : DON MOORE COMMUNITY CENTRE
Cnr of North Rocks Rd & Farnell Avenue, North Rocks, NSW 2118
TICKET: 30$/family or 20$/ person

Basavaraj - 0406338200, Rajesh - 0466378744, Mallikarjun - 0425366286, Somashekar - 0450408141, Shivakumar - 0401057625

ಹೋಳಿ ಮಹೋತ್ಸವ

ಮಾರ್ಚ್ ೧೬, ೨೦೧೭

ಡಾರ್ಲಿಂಗ್ ಹಾರ್ಬರ್,
ಟುಂಬಲಾಂಗ್ ಪಾರ್ಕ್, ಸಿಡ್ನಿ
http://holimahotsav.com.au/

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.